# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶನಿವಾರ, ಮಾರ್ಚ್ 11, 2023

ಸಂಪುಟ : 49 ಸಂಚಿಕೆ : 298 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




**ವಿಜೃಂಭಣೆಯ ನಾಯಕನಹಟ್ಟಿ ತಿಪ್ಪೇಶನ ತೇರು**

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ಶ್ರೀ ಗುರು ತಿಪ್ಪೇರುದ್ರಸ್ವಾಮಿ ರಥೋತ್ಸವವು ಶುಕ್ರವಾರ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

# 5, 8ನೇ ಪಬ್ಲಿಕ್ ಪರೀಕ್ಷೆ ರದ್ದು



**ಇದೇ ಮಾರ್ಚ್ 13ರಿಂದ ನಡೆಯಬೇಕಾಗಿದ್ದ ಪರೀಕ್ಷೆ**

**ಉಚ್ಚ ನ್ಯಾಯಾಲಯದ ಮೊರೆ ಹೋಗಿದ್ದ ಖಾಸಗಿ ಸಂಸ್ಥೆಗಳು**

ಬೆಂಗಳೂರು, ಮಾ. 10 – ಈ ವರ್ಷ 5 ಹಾಗೂ 8ನೇ ತರಗತಿಗಳಿಗೆ ಪಬ್ಲಿಕ್ ಪರೀಕ್ಷೆ ನಡೆಸದಂತೆ ಹೈ ಕೋರ್ಟ್ ಆದೇಶ ಹೊರಡಿಸಿದ್ದು, ಎಂದಿನಂತೆ ಶಾಲಾ ಹಂತದಲ್ಲಿಯೇ ಪರೀಕ್ಷೆ ನಡೆಸುವಂತೆ ತಿಳಿಸಿದೆ.

ಬರುವ ಮಾರ್ಚ್ 13ರಿಂದ ಈ ಪರೀಕ್ಷೆಗಳು ನಡೆಯಬೇಕಿತ್ತು. ಪರೀಕ್ಷೆಯನ್ನು ಪ್ರಶ್ನಿಸಿ ಖಾಸಗಿ ಶಾಲೆಗಳು ಹೈಕೋರ್ಟ್ ಮೊರೆ ಹೋಗಿದ್ದವು.

ಈ ಬಗ್ಗೆ ವಿಚಾರಣೆ ನಡೆಸಿದ ಹೈಕೋರ್ಟ್ ಏಕಸದಸ್ಯ ಪೀಠದ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರ್, ಪಬ್ಲಿಕ್ ಪರೀಕ್ಷೆಯನ್ನು ರದ್ದುಗೊಳಿಸಿದ್ದಾರೆ. ಪಬ್ಲಿಕ್ ಪರೀಕ್ಷೆ ನಡೆಸುವ ಶಿಕ್ಷಣ ಇಲಾಖೆಯ ನಿರ್ಧಾರಕ್ಕೆ ಪೋಷಕರು ಹಾಗೂ ವಿದ್ಯಾರ್ಥಿಗಳಿಂದಲೂ ಅಸಮಾಧಾನ ವ್ಯಕ್ತವಾಗಿತ್ತು.

2022-23ನೇ ಸಾಲಿನಿಂದ 5ನೇ ತರಗತಿ ಮತ್ತು 8ನೇ ತರಗತಿ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ ಪರಿಶೀಲನೆಗಾಗಿ ಪಬ್ಲಿಕ್ ಪರೀಕ್ಷೆ ನಡೆಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿರ್ಧರಿಸಿತ್ತು. ರಾಜ್ಯ ಪಠ್ಯಕ್ರಮವನ್ನು ಅನುಸರಿಸುತ್ತಿರುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ಪಬ್ಲಿಕ್ ಪರೀಕ್ಷೆ ನಡೆಸಲು ಸೂಚಿಸಿತ್ತು. ಈ ತಿಂಗಳ 13 ರಿಂದ ಪರೀಕ್ಷೆಗಳನ್ನು ನಡೆಸಲು ನಿರ್ಧರಿಸಲಾಗಿತ್ತು.

ಆದರೆ, ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಕಳೆದ ಡಿಸೆಂಬರ್ 12, 2022ರಂದು ಪಬ್ಲಿಕ್ ಪರೀಕ್ಷೆಯ ಸುತ್ತೋಲೆ ಹೊರಡಿಸಿದ್ದು ಆಕ್ಷೇಪಕ್ಕೆ ಕಾರಣವಾಗಿತ್ತು.

ಅಲ್ಲದೇ, ಕಲಿಕಾ ಚೇತರಿಕೆ ಪಠ್ಯಕ್ರಮದ ಅಡಿಯಲ್ಲಿ ಪ್ರಶ್ನೆಗಳನ್ನು ಸಿದ್ಧಪಡಿಸಲು ಶಿಕ್ಷಣ ಇಲಾಖೆ ನಿರ್ಧರಿಸಿತ್ತು. ಈ (4ನೇ ಪುಟಕ್ಕೆ)

## ಜಗಳೂರು : ಬಿಜೆಪಿ ಆಡಳಿತದಿಂದ ಸಂವಿಧಾನ, ಪ್ರಜಾಪ್ರಭುತ್ವಕ್ಕೆ ದಕ್ಕೆ



**ಪ್ರಜಾಧ್ವನಿ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ**

ಜಗಳೂರು, ಮಾ.10- ಬಿಜೆಪಿ ಆಡಳಿತದಿಂದ ಸಂವಿಧಾನಕ್ಕೆ, ಪ್ರಜಾಪ್ರಭುತ್ವಕ್ಕೆ ದಕ್ಕೆ ಬಂದಿದೆ. ಅವರಿಗೆ ಸಂವಿಧಾನ, ಸಾಮಾಜಿಕ ನ್ಯಾಯದ ಮೇಲೆ ನಂಬಿಕೆ ಇಲ್ಲ ಎಂದು ವಿರೋಧ ಪಕ್ಷದ ನಾಯಕ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ಪಟ್ಟಣದ ಬಯಲು ರಂಗಮಂದಿರ ಆವರಣದಲ್ಲಿ ಕಾಂಗ್ರೆಸ್ ಹಮ್ಮಿಕೊಂಡಿದ್ದ 'ಪ್ರಜಾಧ್ವನಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂಘ ಪರಿವಾರದ ಗೋಲ್ವಾಲ್ಕರ್, ಸಾವರ್ಕರ್ ರವರ ಸಾಮಾಜಿಕ ನ್ಯಾಯ, ಸಂವಿಧಾನದ ಒಂದೂ ಹೇಳಿಕೆಗಳಿಲ್ಲ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನದ ಆಶಯದಂತೆ ಧರ್ಮಾತೀತ, ಜಾತ್ಯತೀತ ಸಮಾನತೆಯ ವಿರುದ್ಧ ಸಂಘ ಪರಿವಾರವಿದೆ. ವಿವೇಕಾನಂದರ ಹೇಳಿಕೆಯಂತೆ ಪುರೋಹಿತ ಶಾಹಿ, ಮನುವಾದಿಗಳು ದೇಶಕ್ಕೆ ಶಾಪ ಎಂದರು.

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಶೇ.17.15, ಪರಿಶಿಷ್ಟ ವರ್ಗ 6.95 ಸೇರಿ ಶೇ.24.1 ರಷ್ಟು ಪರಿಶಿಷ್ಟ ಸಮುದಾಯದವರು ವಾಸವಾಗಿದ್ದಾರೆ. ನಾನು ಮುಖ್ಯಮಂತ್ರಿಯಾದ ನಂತರ ವಿವಿಧ ಸಮುದಾಯಗಳ ಜನಸಂಖ್ಯೆಗಳಿಗನುಗುಣವಾಗಿ ಎಸ್‌ಇಪಿ, ಟಿಎಸ್‌ಪಿ ಕಾನೂನು ಜಾರಿಗೊಳಿಸಿದೆ. ಆದರೆ ಬಿಜೆಪಿಯವರು ದೇಶದ ಯಾವ ರಾಜ್ಯದಲ್ಲಿಯಾದರೂ ಪರಿಶಿಷ್ಟ ಸಮುದಾಯದ ಪರ ಏಕೆ ಕಾನೂನು ಜಾರಿಗೊಳಿಸಿಲ್ಲ. ಹಾಗಾದರೆ ಸಮುದಾಯದವರು ಏಕೆ ಬಿಜೆಪಿಗೆ ಮತ ನೀಡಬೇಕು? ಎಂದು ಪ್ರಶ್ನಿಸಿದರು.

ಪ್ರಧಾನಿ ನರೇಂದ್ರ ಮೋದೀಜಿ ಸಬ್ ಕಾ ಸಾಥ್ ಸಬ್ ಕಾ ವಿಕಾಸ್ (3ನೇ ಪುಟಕ್ಕೆ)

## ಚನ್ನಗಿರಿ : ಭ್ರಷ್ಟಾಚಾರದ ಸಾಕ್ಷಿ ಸಿಕ್ಕರೂ ರಾಜೀನಾಮೆ ನೀಡದ ಸಿಎಂ



ಚನ್ನಗಿರಿ, ಮಾ.11- ಸರ್ಕಾರದಲ್ಲಿ ಹೆಚ್ಚಾಗಿರುವ ಭ್ರಷ್ಟಾಚಾರದ ಬಗ್ಗೆ ನಮ್ಮ ಪಕ್ಷ ಪ್ರತಿಭಟನೆ ಮಾಡಿ ಮುಖ್ಯಮಂತ್ರಿ ರಾಜೀನಾಮೆ ಕೊಡಬೇಕು ಎಂದು ಒತ್ತಾಯಿಸಿದಾಗ ಸಾಕ್ಷಿ ಕೊಡಿ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಕೇಳಿದ್ದರು. ಈಗ ನೂರಾರು ಸಾಕ್ಷಿಗಳು ಸಿಕ್ಕರೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಜೀನಾಮೆ ನೀಡಲಿಲ್ಲ. ಬಿಜೆಪಿ ಮುಖಂಡರಿಗೆ ಸ್ವಲ್ಪವೂ ನಾಚಿಕೆ, ಮಾನ ಮರ್ಯಾದೆ ಇಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಪಟ್ಟಣದಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಯಾವ ಪುರುಷಾರ್ಥಕ್ಕೆ ಇವರು ಸಂಕಲ್ಪ ಯಾತ್ರೆ ಮಾಡುತ್ತಿದ್ದಾರೆ? ವಿಜಯ ಸಂಕಲ್ಪ ಯಾತ್ರೆ ಮಾಡುವ ಮೂಲಕ ಬಿಜೆಪಿಯವರು ರಾಜ್ಯದ ಜನರಿಗೆ ಸುಳ್ಳು ಹೇಳಿಕೊಂಡು ತಿರುಗುತ್ತಿದ್ದಾರೆ ಎಂದು ಹೇಳಿದರು.

ಬಸವರಾಜ ಬೊಮ್ಮಾಯಿ ನೀನು ಆಚಾನಕ್ ಆಗಿ (4ನೇ ಪುಟಕ್ಕೆ)

### ವಡ್ನಾಳ್ ರಾಜಣ್ಣ ಒಪ್ಪಿದರೆ ಅಭ್ಯರ್ಥಿ

**ವಡ್ನಾಳ್ ರಾಜಣ್ಣ ಒಪ್ಪಿದರೆ ಅವರೇ ಅಭ್ಯರ್ಥಿ ಎಂದು ಮಾಜಿ ಸಿಎಂ ಸಿದ್ಧರಾಮಯ್ಯ ಹೇಳಿದರು. ವಡ್ನಾಳ್ ರಾಜಣ್ಣ ಟಿಕೆಟ್‌ಗೆ ಅರ್ಜಿ ಹಾಕಿಲ್ಲ. ಆದರೂ ನಾವು ಅವರಿಗೆ ಟಿಕೆಟ್ ಕೊಡ್ತೀವಿ. ಅವರು ಚನ್ನಗಿರಿಯಲ್ಲಿ ಗೆಲ್ಲುವುದು ಖಚಿತ ಎಂದು ಹೇಳಿದರು.**


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 10.03.2023ರ ಶುಕ್ರವಾರ ಮಧ್ಯಾಹ್ನ 3.20 ಕ್ಕೆ ಶಿವೈಕ್ಯರಾದ
ಶ್ರೀ ನಾರದಮುನಿ ಸೇವಾ ಟ್ರಸ್ಟ್ (ರಿ.) ಚಿಗಟೇರಿ ಉಪಾಧ್ಯಕ್ಷರು,
ದಾವಣಗೆರೆ ತಾಲ್ಲೂಕು ನಲ್ಕುಂದ ಗ್ರಾಮದ

**ಶ್ರೀ ನಲ್ಕುಂದ ಹೆಚ್. ಜಯಪ್ಪ**

ಇವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತಾ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ, ಮೃತರ ಕುಟುಂಬ ವರ್ಗದವರಿಗೆ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

**ಅಣಬೇರು ರಾಜಣ್ಣ,** ಅಧ್ಯಕ್ಷರು
**ವೊಡ್ಡಿನಹಳ್ಳಿ ಷಡಕಣ್ಣ,** ಉಪಾಧ್ಯಕ್ಷರು

ಟ್ರಸ್ಟಿಗಳಾದ

♦ ಶಾಮನೂರು ಬಸಣ್ಣ ♦ ಎಲೆಬೇತೂರು ಕರಿಬಸಪ್ಪ ♦ ಈ. ನಾಗರಾಜ ಪಲ್ಲಾಗಟ್ಟೆ,
♦ ಕೆ.ಬಿ. ಬಸವಲಿಂಗಪ್ಪ ಬಿ. ಕಲಪನಹಳ್ಳಿ ♦ ಸಿ.ಈಶ್ವರಪ್ಪ ಆವರಗೆರೆ ♦ ಹುಣಸೇಹಳ್ಳಿ ಜಾತಪ್ಪ
♦ ಬಿ.ಎಸ್. ವೇದಮೂರ್ತಿ ಹೊಳಲ್ಕೆರೆ ♦ ಕೆ.ಪರಮೇಶ್ವರಪ್ಪ ಕ್ಯಾಸಿನಕೆರೆ
♦ ಜಿ.ಬಿ ಸುರೇಶ್ ಕುಮಾರ್ ಇಂಜಿನಿಯರ್ ♦ ಲೋಕೇಶ್ ಸೋಮನಾಳು

**ಶ್ರೀ ನಾರದಮುನಿ ಸೇವಾ ಟ್ರಸ್ಟ್ (ರಿ.) ಚಿಗಟೇರಿ.**


## ಲಂಚವಾಗಿ ಎತ್ತು ಕೊಡಲು ಮುಂದಾದ ಸವಣೂರಿನ ರೈತ

ಹಾವೇರಿ, ಮಾ. 10 – ರೈತನೋರ್ವ ಪುರಸಭೆ ಅಧಿಕಾರಿಗೆ ತನ್ನ ಎತ್ತನ್ನೇ ಲಂಚವಾಗಿ ನೀಡಲು ಬಂದ ಘಟನೆ ಸವಣೂರಿನಲ್ಲಿ ನಡೆದಿದೆ.

ರೈತ ಯಲ್ಲಪ್ಪ ರಾಣೋಜಿ ಅವರ ಮನೆ ಖಾತೆ ಬದಲಿಸಬೇಕಿತ್ತು. ಇದಕ್ಕಾಗಿ ಹಿಂದೊಬ್ಬ ಅಧಿಕಾರಿಗೆ ಹಣ ಕೊಟ್ಟಿದ್ದರು. ಆ ಅಧಿಕಾರಿ ವರ್ಗಾವಣೆಯಾಗಿ, ಇನ್ನೋರ್ವ ಅಧಿಕಾರಿ ಬಂದಿದ್ದರು. ಅಧಿಕಾರಿ ಮತ್ತೆ ಹಣ ಕೊಡುವಂತೆ ಕೇಳಿದ್ದರು.

ಈ ಹಿನ್ನೆಲೆಯಲ್ಲಿ ಎತ್ತು ಹಾಗೂ ಬಾರಕೋಲು (3ನೇ ಪುಟಕ್ಕೆ)

## ಇಂದಿನಿಂದ ಭದ್ರಾ ಜಲಾಶಯದಿಂದ ತುಂಗಭದ್ರಾ ನದಿಗೆ ನೀರು

ದಾವಣಗೆರೆ, ಮಾ.10- ಭದ್ರಾ ಜಲಾಶಯದಿಂದ ತುಂಗಭದ್ರಾ ಎಡದಂಡೆ ನಾಲೆಯ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆದು ನಿಂತ ಬೆಳೆಗಳಿಗೆ ಇಂದಿನಿಂದ ದಿನಾಂಕ 21 ರವರೆಗೆ ಪ್ರತಿ ದಿನ 2000 ಕ್ಯೂಸೆಕ್ಸ್‌ನಂತೆ ನೀರನ್ನು ಹರಿಸಲಾಗುತ್ತದೆ. ರೈತ ಬಾಂಧವರು ನದಿ ದಂಡೆಯಲ್ಲಿ ಅಳವಡಿಸಿರುವ ಪಂಪ್‌ಸೆಟ್‌ಗಳಿಂದ ಅಕ್ರಮವಾಗಿ (3ನೇ ಪುಟಕ್ಕೆ)


॥ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ಪ್ರಸನ್ನ ॥ ॥ ಶ್ರೀ ಬನಶಂಕರಿದೇವಿ ಪ್ರಸನ್ನ॥

## ವೈಕುಂಠ ಸಮಾರಾಧನೆ ಆಹ್ವಾನ



ದಾವಣಗೆರೆ ಸಿಟಿ ವಾಸಿ
**ಶ್ರೀ ಬಿ. ಶಂಕರ್**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 02.03.2023ನೇ ಗುರುವಾರ ಬೆಳಿಗ್ಗೆ 5.00 ಕ್ಕೆ ನನ್ನ ಧರ್ಮಪತ್ನಿ
**ಶ್ರೀಮತಿ ಮಂಜುಳ**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ "ವೈಕುಂಠ ಸಮಾರಾಧನೆ"ಯನ್ನು
ದಿನಾಂಕ : 11.03.2023ನೇ ಶನಿವಾರ ಮಧ್ಯಾಹ್ನ 12.30 ಗಂಟೆಗೆ ದಾವಣಗೆರೆಯ ಸುಪ್ರ ನಿಲಯ, # 3371/20, 12ನೇ ಮೇನ್, ಕುವೆಂಪು ನಗರ, ಎಂಸಿಸಿ ಬಿ ಬ್ಲಾಕ್ ಇಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ, ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
**ಶ್ರೀ ಬಿ. ಶಂಕರ್ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಬಂಧು-ಮಿತ್ರರು,** ಫೋ. : 94484 39755

ವಿ.ಸೂ. : ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



## ಸಾರ್ವಜನಿಕರ ಗಮನಕ್ಕೆ

ದಿನಾಂಕ 26.02.2023 ರಂದು ಜನತಾವಾಣಿಯಲ್ಲಿ ಶಾಮನೂರು ಗ್ರಾಮದ ರಿ.ಸರ್ವೇ ನಂಬರ್ 220 ರಲ್ಲಿಯ 30 ಎಕರೆ 30 ಗುಂಟೆ ಜಮೀನಿನ ಬಗ್ಗೆ ಪ್ರಕಟವಾದ ಪ್ರಕಟಣೆ ಬಗ್ಗೆ ಸರಿಯಾದ ಮಾಹಿತಿ ಈ ಕೆಳಕಂಡಂತೆ ಕೊಡುತ್ತಿದ್ದೇವೆ:-

ಅಸಲು ದಾವೆ ನಂಬರ್ 27/2016ರಲ್ಲಿ ನನ್ನ ಕಕ್ಷಿದಾರರಾದ ಶ್ರೀಮತಿ ಪಾರ್ವತಮ್ಮ ತನ್ನ ದಾಯಾದಿಗಳ ಮೇಲೆ ಪಾಲು ವಿಭಾಗ ದಾವೆ ಮಾಡಿದ್ದು ನಂತರ ಡಿಕ್ರಿ ಆಗಿ ನಂತರ ಎಫ್.ಡಿ.ಪಿ.52/2018 ಹಾಕಿದ್ದು, ಅದರಲ್ಲಿ ನ್ಯಾಯಾಲಯದಿಂದ ಆಯುಕ್ತರು ನೇಮಕಗೊಂಡಿದ್ದು, ಸದರಿಯ ಆಯುಕ್ತರು ಸರ್ವೆ ನಂಬರ್ 220/ಪಿ ರಲ್ಲಿಯ 13 ಎಕರೆ 15 ಗುಂಟೆ ಜಮೀನು ಅಳತೆ ಮಾಡಿ ಪಾಲು ಮಾಡಿ ಕೊಟ್ಟಿದ್ದು ಅದರಂತೆ ಅವರವರ ಜಾಗ ನ್ಯಾಯಾಲಯದ ಆದೇಶದಂತೆ ಪಡೆದಿರುತ್ತಾರೆ.

ಅದೇ ದಿನಾಂಕ 26.02.2023 ಜನತಾವಾಣಿಯಲ್ಲಿ ತಿಳಿಸಿರುವಂತೆ ಯಾವುದೇ ಮೋಸವಾಗಿರುವುದಿಲ್ಲ. ಅಲ್ಲದೇ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅಪೀಲ್ ಪೆಂಡಿಂಗ್ ಇದೆ ಎಂದು ತೋರಿಸಿದ್ದು, ಕೇಸಿನ ಅಥವಾ ಅಪೀಲಿನ ನಂಬರ್ ಹಾಕದೇ ಇರುವುದು ಅನುಮಾನಕ್ಕೆ ಎಡೆ ಮಾಡಿಕೊಡುತ್ತದೆ.

ನನ್ನ ಕಕ್ಷಿದಾರರಾದ ಶ್ರೀಮತಿ ಪಾರ್ವತಮ್ಮ ಇವರ ಪರವಾಗಿ ಆಗಿರುವ ಆಸ್ತಿಯ ಹಕ್ಕಿನ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅಫೀಲು ಇದ್ದಲ್ಲಿ ಸದರಿ ಅಫೀಲಿನಲ್ಲಿ ಆಗುವ ತೀರ್ಮಾನದಂತೆ ನನ್ನ ಕಕ್ಷಿದಾರು ನಡೆಯಲು ಬದ್ಧರಾಗಿರುತ್ತಾರೆ.

ಒಂದು ವೇಳೆ ಸ.ನಂ.220ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅಪೀಲ್ ಹಾಕಿದ್ದಲ್ಲಿ ಈ ಪ್ರಕಟಣೆ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಸದರಿ ಅಪೀಲು ತೀರ್ಮಾನವಾಗುವ ತನಕ ಸರ್ವೆ ನಂಬರ್ 226 ರಲ್ಲಿ ಇರುವ 30 ಎಕರೆ 30 ಗುಂಟೆ ಜಮೀನು ಅಪೀಲುದಾರರು ಮಾರಲು ಬರುವುದಿಲ್ಲ ಹಾಗೂ ಯಾವುದೇ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಳ್ಳಲು ಬರುವುದಿಲ್ಲ. ಯಾಕೆಂದರೆ ಸದರಿ ತೀರ್ಪಿನಲ್ಲಿ ಆಸ್ತಿಯು ಯಾರ ಪಾಲಿಗೆ ಬರುತ್ತದೆಯೋ ಈಗಲೇ ಗೊತ್ತಾಗುವುದಿಲ್ಲ.

ಒಂದು ವೇಳೆ ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ಅಪೀಲು ದಾಖಲು ಮಾಡಿದ ಅಪೀಲುದಾರರು ಸರ್ವೆ ನಂಬರ್ 220ರಲ್ಲಿ ಇರುವ ಆಸ್ತಿಗಳನ್ನು ಬೇರೆ ಯಾರಿಗಾದರೂ ಮಾರಾಟ ಮಾಡಿದ್ದಲ್ಲಿ ಖರೀದಿದಾರರ ಹೆಸರನ್ನು ಉಚ್ಚ ನ್ಯಾಯಾಲಯಕ್ಕೆ ತಿಳಿಸಬೇಕಾಗುತ್ತದೆ ಹಾಗು ಮಾರಾಟ ಮಾಡಿದ ಆಸ್ತಿಯ ಬಗ್ಗೆ ಅಪೀಲು ಹಾಕಲು ಈಗಿರುವ ಅಪೀಲುದಾರರಿಗೆ ಅಧಿಕಾರ ಇರುವುದಿಲ್ಲ.

**ಶಾಮನೂರು ಗ್ರಾಮ ಸರ್ವೆ ನಂಬರ್. 220ರಲ್ಲಿ 30 ಎಕರೆ 30 ಗುಂಟೆ ಜಮೀನಿನ ಮೇಲೆ ಯಾವುದೇ ಬ್ಯಾಂಕ್ ಸಾಲ ಕೊಟ್ಟಿದ್ದಲ್ಲಿ, ಸದರಿ ಸಾಲಕ್ಕೆ ನನ್ನ ಕಕ್ಷಿಗಾರರು ಹೊಣೆಗಾರರು ಆಗಿರುವುದಿಲ್ಲ. ಆದುದರಿಂದ ಸರ್ವೆ ನಂ.220 ರಲ್ಲಿ 30 ಎಕರೆ 30 ಗುಂಟೆ ಜಮೀನಿನ ಮೇಲೆ ಸಾಲ ಕೊಟ್ಟ ಬ್ಯಾಂಕ್‌ಗಳಿಗೆ ಈ ಪ್ರಕಟಣೆ ಮೂಲಕ ಎಚ್ಚರಿಕೆ ನೀಡುತ್ತಿದ್ದೇವೆ.**

ದಿನಾಂಕ : 10.03.2023
ಸ್ಥಳ : ದಾವಣಗೆರೆ

**ಜಿ. ಎಸ್. ರಾಜಾ ರಾವ್**
ಹಿರಿಯ ವಕೀಲರು,
ವಿನೋಬನಗರ, ದಾವಣಗೆರೆ. ಮೊ.ನಂ.94481-78596.



Shamanur Education Trust (R.)

**SMT.PUSHPA SHAMANUR MAHALINGAPPA RESIDENTIAL CBSE / ICSE SCHOOL & PU SCIENCE COLLEGE**

# 5335, 1st Main, Road, Near Bapuji Engineering College, Swamy vivekananda badavane, Davanagere, Karnataka

**REQUIRED TEACHERS & STAFF**

We invite well qualified & experienced teachers for our CBSE & ICSE Schools.

**WALK IN DRIVE**

Date : 12.03.2023 to 19.03.2023
Timing : 10 AM to 4 PM

SCIENCE, MATHS, SOCIAL & ENGLISH

| CLASS | SALARY |
| --- | --- |
| 1st - 4th Std | Upto 37K |
| 5th - 8th Std | Upto 45K |
| 9th - 10th Std | Upto 55K |

CO-ORDINATOR For Pre-School, Middle School & High School — Salary Upto 50K

SENIOR LECTURERS (PCMB) - PU BOARD - KCET / NEET
JUNIOR LECTURERS (PCMB)

✦ Front Office Executives ✦ Yoga Trainer
✦ Sports Coaches for all Games ✦ Warden
✦ Marketing Executive & Team Manager

Mail Your resume along with Experience to :
hrspsm.set@gmail.com
or whatsapp 9108411808

For Enquiry Call : 89700 71100

# ರಾಜ್ಯದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದು ಖಚಿತ

## ಕೊಟ್ಟೂರಿನಲ್ಲಿ ಸಚಿವ ಸಿ. ಅಶ್ವತ್ಥ್ ನಾರಾಯಣ



ಕೊಟ್ಟೂರು, ಮಾ.10- ನಮ್ಮ ರಾಜ್ಯದಲ್ಲಿ ಯಾವುದೇ ಬಿಜೆಪಿ ನಾಯಕರು ಪಕ್ಷ ತೊರೆದು ಕಾಂಗ್ರೆಸ್‌ಗೆ ಹೋಗುತ್ತಾರೆಂಬುದು ಸುಳ್ಳು ಸುದ್ದಿ. ಬಿಜೆಪಿಯಿಂದ ಯಾವುದೇ ಶಾಸಕ ಅಥವಾ ಮುಖಂಡರು ಹೊರಗೆ ಹೋಗುವುದಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಆಡಳಿತವನ್ನು ಇಡೀ ದೇಶದ ಜನತೆ ನೋಡಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಮತ್ತೆ ಬಿಜೆಪಿ ಸರ್ಕಾರ ಬರುವುದು ಖಚಿತ ಎಂದು ಸಚಿವ ಸಿ.ಅಶ್ವತ್ಥ್ ನಾರಾಯಣ ಹೇಳಿದರು.

ಕೂಡ್ಲಿಗಿಯ ಬಿಜೆಪಿ ಮುಖಂಡರೊಬ್ಬರ ಮನೆ ಗೃಹ ಪ್ರವೇಶ ಕಾರ್ಯಕ್ರಮಕ್ಕೆ ಹೆಲಿಕಾಪ್ಟರ್‌ನಲ್ಲಿ ಆಗಮಿಸಿದ್ದ ಅವರು, ಕೊಟ್ಟೂರು ಹೊರವಲಯದ ಹೆಲಿಪ್ಯಾಡ್‌ನಲ್ಲಿ ಬಂದಿಳಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಪ್ರತಿಯೊಂದು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಅಧಿಕಾರ ಹಿಡಿಯುವುದು ಖಚಿತ. ನಮ್ಮ ಬಿಜೆಪಿ ಸರ್ಕಾರ ಬಡವರ ಮನೆ ಬಾಗಿಲಿಗೆ ಪ್ರತಿಯೊಂದು ಯೋಜನೆಗಳು ಮುಟ್ಟುವಂತೆ ಮಾಡಿದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ರೈತ ವರ್ಗದ ಕುಟುಂಬಗಳಿಗೆ ನೆರವಾಗಿದ್ದೆಂದರೆ ಅದು ಬಿಜೆಪಿ ಸರ್ಕಾರ ಮಾತ್ರ ಎಂದು ಹೇಳಿದರು.

ನಂತರ ಚಾಮರಾಜನಗರ ಜಿಲ್ಲೆ ಉಸ್ತುವಾರಿ ಸಚಿವರಿದ್ದರೂ ಅಲ್ಲಿ ನಡೆದ ಪಕ್ಷದ ಕಾರ್ಯಕ್ರಮಕ್ಕೆ ವಿ.ಸೋಮಣ್ಣ ಗೈರಾಗಿದ್ದಕ್ಕೆ ಬೇರೆ ಅರ್ಥ ಕಲ್ಪಿಸುವುದು ಸರಿಯಲ್ಲ. ಅವರು ಬೇರೆ ಯಾವುದೋ ಕೆಲಸ ನಿಮಿತ್ತ ಗೈರಾಗಿರಬಹುದು. ಅಲ್ಲದೇ ಪಕ್ಷದಲ್ಲಿ ಸಣ್ಣ ಪುಟ್ಟ ಸಮಸ್ಯೆಗಳು ಇದ್ದೇ ಇರುತ್ತವೆ. ಹೀಗೆಂದ ಮಾತ್ರಕ್ಕೆ ಅವರು ಪಕ್ಷವನ್ನೇ ಬಿಡುತ್ತಾರೆ ಎಂಬುದು ಸರಿಯಲ್ಲ. ಮತ್ತೊಬ್ಬ ಸಚಿವ ನಾರಾಯಣಗೌಡರು ಸಹ ಬಿಜೆಪಿ ಬಿಡೋದಿಲ್ಲ. ಅವರಿಗೆ ಬಿಜೆಪಿ ಟಿಕೆಟ್ ಗ್ಯಾರಂಟಿ ಎಂದರು.


ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ, ತಾಲ್ಲೂಕು ಘಟಕದ ಅಧ್ಯಕ್ಷ ಬಿ. ವಿಕ್ರಂ, ಪದಾಧಿಕಾರಿಗಳಾದ ಕಾಮಶೆಟ್ಟಿ ಕೊಟ್ರೇಶ್, ಡಾ. ರಾಕೇಶ್, ಬುಲ್ ಶ್ರೀನಿವಾಸ್ ಹಾಗು ಮತ್ತಿತರೆ ಗಣ್ಯರು ಉಪಸ್ಥಿತರಿದ್ದರು.

# ಸುಂಕದಕಟ್ಟೆ ನರಸಿಂಹಸ್ವಾಮಿ ದೊಡ್ಡ ತೇರು



ಹೊನ್ನಾಳಿ, ಮಾ. 10- ತಾಲ್ಲೂಕಿನ ಸುಂಕದಕಟ್ಟೆ ಗ್ರಾಮದಲ್ಲಿ ಈಚೆಗೆ ಶ್ರೀ ನರಸಿಂಹ ಸ್ವಾಮಿ ದೊಡ್ಡ ರಥೋತ್ಸವ ನೆರವೇರಿತು. ಅಲಂಕೃತ ರಥಕ್ಕೆ ಭಕ್ತರು ಮಂಡಕ್ಕಿ, ಬಾಳೆಹಣ್ಣು, ಮೆಣಸಿನಕಾಳು ಎರಚುವ ಮೂಲಕ ಭಕ್ತಿ ಸಮರ್ಪಿಸಿದರು. ನಿನ್ನೆ ಬೆಳಿಗ್ಗೆ 10.30ಕ್ಕೆ ಹೂವಿನ ಉಚ್ಛಾಯ(ಬ್ರಹ್ಮರಥೋತ್ಸವ) ಜರುಗಿತು. ಸುಂಕದಕಟ್ಟೆ ಗ್ರಾಮದ ಶ್ರೀ ಮಂಜುನಾಥ ಸ್ವಾಮಿ, ಶ್ರೀ ನರಸಿಂಹ ಸ್ವಾಮಿ ದೇವಸ್ಥಾನ ಸಮಿತಿಯ ಅಧ್ಯಕ್ಷ ಎಸ್.ಕೆ. ನರಸಿಂಹಮೂರ್ತಿ, ಪ್ರಧಾನ ಅರ್ಚಕ ಎಸ್. ರಾಜುಸ್ವಾಮಿ ಹಾಗು ಗ್ರಾಮಸ್ಥರು ಇದ್ದರು.

## ಕೋರ್ಟ್ ಕೇಸ್‌ಗೆ ಹಣವಿಲ್ಲ ಎಂದ ನೀರವ್ ಮೋದಿ



ಲಂಡನ್, ಮಾ. 10 – ಬ್ರಿಟನ್ ನ್ಯಾಯಾಲಯದ ಆದೇಶದಂತೆ 1.50 ಲಕ್ಷ ಪೌಂಡ್ ಕಾನೂನು ಸೇವಾ ಶುಲ್ಕ ಪಾವತಿಸಲು ತನ್ನ ಬಳಿ ಹಣವಿಲ್ಲ ಎಂದು ಬಹುಕೋಟಿ ವಂಚನೆ ಹಾಗೂ ಅಕ್ರಮ ಪ್ರಕರಣದಲ್ಲಿ ಸಿಲುಕಿರುವ ನೀರವ್ ಮೋದಿ ಹೇಳಿಕೆ ನೀಡಿದ್ದಾನೆ.

52 ವರ್ಷದ ನೀರವ್ ಮೋದಿ ಹಸ್ತಾಂತರಕ್ಕಾಗಿ ಭಾರತ ಪ್ರಕರಣ ದಾಖಲಿಸಿತ್ತು. 2 ಶತಕೋಟಿ ಡಾಲರ್‌ಗಳ ಪಂಜಾಬ್ ನ್ಯಾಷನಲ್ ಬ್ಯಾಂಕ್ ವಂಚನೆ ಪ್ರಕರಣದಲ್ಲಿ ನೀರವ್ ಮೋದಿ ಆರೋಪಿ. ಭಾರತಕ್ಕೆ ಹಸ್ತಾಂತರಿಸುವ ಪ್ರಕರಣದಲ್ಲಿ ನೀರವ್‌ಗೆ ಕಳೆದ ವರ್ಷ ಸೋಲಾಗಿತ್ತು.

ಪ್ರಸಕ್ತ ನೀರವ್ ವ್ಯಾಂಡ್ಸ್‌ವರ್ತ್ ಬಂಧೀಖಾನೆಯಲ್ಲಿದ್ದಾನೆ. ಆತ 1.50 ಲಕ್ಷ ಪೌಂಡ್ ಕಾನೂನು ವೆಚ್ಚ ಶುಲ್ಕ ಹಾಗೂ ದಂಡಗಳನ್ನು ಪಾವತಿಸಬೇಕಿದೆ. ಮುಂದಿನ ಆರು ತಿಂಗಳ ಕಾಲ ತಿಂಗಳಿಗೆ 10 ಸಾವಿರ ಪೌಂಡ್ ಹಣ ಪಾವತಿಸುವಂತೆ ನ್ಯಾಯಾಲಯ ತಿಳಿಸಿತ್ತು. ಈ ಬಗ್ಗೆ ಬಾರ್ಕಿಂಗ್‌ಸೈಡ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಎದುರು ವಿಡಿಯೋ ಲಿಂಕ್ ಮೂಲಕ ಹಾಜರಾದ ನೀರವ್, ಹಸ್ತಾಂತರ ಪ್ರಕ್ರಿಯೆಗೆ ಸಂಬಂಧಿಸಿದಂತೆ ಭಾರತ ಸರ್ಕಾರ ತನ್ನ ಆಸ್ತಿಗಳನ್ನು ಜಪ್ತಿ ಮಾಡಿದೆ. ಕಾನೂನು ಶುಲ್ಕ ಪಾವತಿಸಲು ಹಣವಿಲ್ಲ, ಸಾಲ ಪಡೆಯುತ್ತಿದ್ದೇನೆ ಎಂದು ಹೇಳಿದ್ದಾನೆ.

# ದೇವದಾಸಿ ಪದ್ಧತಿಯಿಂದ ಪಾರಾದ ಮಹಿಳೆ



**ಹರಪನಹಳ್ಳಿ**

ಹರಪನಹಳ್ಳಿ, ಮಾ.10- ಮಗಳನ್ನು ದೇವದಾಸಿ ಪದ್ಧತಿಗೆ ತಳ್ಳುವ ಯತ್ನ ನಡೆದಿದೆ ಎಂಬ ವಿಚಾರ ತಿಳಿದು ದೇವದಾಸಿ ಮಹಿಳಾ ವಿಮೋಚನಾ ಸಂಘ, ದೇವದಾಸಿ ಪುನರ್ವಸತಿ ಕೇಂದ್ರ, ಹಾಗೂ ಮಹಿಳಾ ಮತ್ತು ಮಕ್ಕಳ ಇಲಾಖೆ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳು ತಾಲೂಕಿನ ಆಲದಹಳ್ಳಿ ಗ್ರಾಮಕ್ಕೆ ತೆರಳಿ ಪೋಷಕರಿಗೆ ಅರಿವು ಮೂಡಿಸಿದ ಘಟನೆ ಜರುಗಿದೆ.

ಆಲದಹಳ್ಳಿ ಗ್ರಾಮದ ಕಾಡಜ್ಜಿ ಪರಸಪ್ಪ ಹಾಗೂ ನಾಗಮ್ಮ ದಂಪತಿ ಮಗಳಿಗೆ ಮುತ್ತು ಕಟ್ಟಿಸಲು ಮುಂದಾಗಿರುವ ವಿಷಯ ತಿಳಿದು ಬಂದ ಹಿನ್ನೆಲೆಯಲ್ಲೆ ದೇವದಾಸಿ ಮಹಿಳಾ ವಿಮೋಚನಾ ಸಂಘದ ಟಿ.ವಿ.ರೇಣುಕಮ್ಮ, ದೇವದಾಸಿ ಪುನ ರ್ವಸತಿ ಕೇಂದ್ರದ ಹರಪನ ಹಳ್ಳಿ ತಾಲ್ಲೂಕು ಅಧಿಕಾರಿ ಪ್ರಜ್ಞಾ ಹಾಗೂ ಮಹಿಳಾ ಮತ್ತು ಮಕ್ಕಳ ಇಲಾಖೆ ಸೂಪರ ವೈಸರ್ ಹೇಮಾ ಹಾಗೂ ಚಿಗಟೇರಿ ಪೊಲೀಸ್ ಠಾಣೆಯ ಸಿಬ್ಬಂದಿ ತೆರಳಿ ದೇವದಾಸಿ ಬಿಡುವುದು ಅಪರಾಧ. ಹಾಗೆ ಮಾಡ ಬಾರದು ಎಂದು ತಂದೆ-ತಾಯಿಯವರಿಗೆ ಬುದ್ದಿ ಹೇಳಿದ್ದಾರೆ.

ಈ ಕುರಿತು ರೇಣುಕಮ್ಮ ಅವರು ಹೇಳಿಕೆ ನೀಡಿದ್ದು, ಸಾಕಷ್ಟು ಅರಿವು ಮೂಡಿಸುವ ಪ್ರಯತ್ನ ಮಾಡಿದ್ದೇವೆ, ಆ ಹೆಣ್ಣು ಮಗಳಿಗೆ ಅಂತಹ ಅನಿಷ್ಟ ಪದ್ದತಿಗೆ ಹೋಗುವ ಮನಸ್ಸಿಲ್ಲ, ಆದರೆ ತಂದೆ-ತಾಯಿಯ ಒತ್ತಡವಿದೆ ಎಂದು ಹೇಳಿದರು.

ಆ ಸಂತ್ರಸ್ಥ ಹೆಣ್ಣು ಮಗಳಿಗೂ ಧೈರ್ಯ ತುಂಬಿ ಸಮಸ್ಯೆಯಾದರೆ ಕರೆ ಮಾಡಲು ನಮ್ಮ ದೂರವಾಣಿ ಸಂಖ್ಯೆ ನೀಡಿ ಬಂದಿದ್ದೇವೆ ಎಂದು ಹೇಳಿದರು.

## ನಗರದಲ್ಲಿ ಇಂದು ವಿಶ್ವ ಮಹಿಳಾ ದಿನಾಚರಣೆ

ಕರ್ನಾಟಕ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ಜಿಲ್ಲೆಯ ಎಲ್ಲಾ ಶಿಕ್ಷಕರ ವೃಂದ ಸಂಘಗಳ ಸಹಯೋಗದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ವಿಶ್ವ ಮಹಿಳಾ ದಿನಾಚರಣೆ, ವಿವಿಧ ಕ್ಷೇತ್ರಗಳಲ್ಲಿನ ಸಾಧಕಿಯರಿಗೆ 'ಸೇವಾರತ್ನ' ಪ್ರಶಸ್ತಿ ಪ್ರದಾನ ಹಾಗೂ ಶೈಕ್ಷಣಿಕ ಕಾರ್ಯಾಗಾರ ನಡೆಯಲಿದೆ.

ಡಿಡಿಪಿಐ ಜಿ.ಆರ್. ತಿಪ್ಪೇಸ್ವಾಮಿ ಕಾರ್ಯಕ್ರಮ ಉದ್ಘಾಟಿಸುವರು. ಡಯಟ್ ಉಪನಿರ್ದೇಶಕ ಎಸ್. ಗೀತಾ ಅಧ್ಯಕ್ಷತೆ ವಹಿಸಲಿದ್ದಾರೆ. 'ಮಹಿಳಾ ಸಬಲೀಕರಣ ಮತ್ತು ಹಕ್ಕುಗಳು' ಕುರಿತು ಬಿಇಓ ಬಿ.ಎಂ. ದಾರುಕೇಶ್ ಉಪನ್ಯಾಸ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪಾಲಿಕೆ ಆಯುಕ್ತರಾದ ರೇಣುಕಾ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕಿ ವಾಸಂತಿ ಉಪ್ಪಾರ್, ಬಿಇಓ ಟಿ. ಅಂಬಣ್ಣ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಾಲಾಕ್ಷಿ ಭಾಗವಹಿಸುವರು.

ಹೆಚ್. ಅನಿತಾ (ಪತ್ರಿಕಾ ರಂಗ), ಡಿ.ಕೆ. ಮಾಧವಿ (ಕಲಾ ಕ್ಷೇತ್ರ), ಕೆ.ಎಂ. ವೀರಮ್ಮ (ಕೃಷಿ ಸೇವಾ ಕ್ಷೇತ್ರ), ಜಲಜಾಕ್ಷಿ (ಮಹಿಳಾ ಸೇವಾ ಕ್ಷೇತ್ರ), ಎಸ್.ಬಿ. ಸ್ಫೂರ್ತಿ (ನೃತ್ಯ ಕಲಾ ಕ್ಷೇತ್ರ), ಹೆಚ್.ಎನ್. ಸುಧಾ (ರಂಗಕಲಾ ಕ್ಷೇತ್ರ), ಡಿ.ಎಂ. ಪ್ರತಿಮಾ (ಆರೋಗ್ಯ ಕ್ಷೇತ್ರ), ಶಾಂತಮ್ಮ (ಮಕ್ಕಳ ಕ್ಷೇತ್ರ), ಪಿ.ಬಿ. ಗೀತಾ (ಸಾರಿಗೆ ಕ್ಷೇತ್ರ), ಲತಾ ಎಲ್. ವೆಂಕಟೇಶ್ (ಸಮಾಜ ಸೇವಾ ಕ್ಷೇತ್ರ) ಅವರುಗಳಿಗೆ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು.

## ನಾಡಿದ್ದು ರಾಜ್ಯಕ್ಕೆ ಪ್ರಧಾನಿ



ಬೆಂಗಳೂರು, ಮಾ. 10 - ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನಾಡಿದ್ದು ದಿನಾಂಖ 12 ರಂದು ರಾಜ್ಯದ ಧಾರವಾಡಕ್ಕೆ ಆಗಮಿಸುತ್ತಿದ್ದು, ಬೆಂಗಳೂರು- ಮೈಸೂರು ದಶಪಥ ಹೆದ್ದಾರಿ, ಐ.ಐ.ಟಿ, ಜಲ್‌ಜೀವನ್ ಮಿಷನ್ ಹಾಗೂ ಜಯದೇವ ಹೃದ್ರೋಗ ಸಂಸ್ಥೆಯ ಉದ್ಘಾಟನೆ ನೆರವೇರಿಸಲಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಿ ಬಂದಾಗ ರಾಜ್ಯದ ಅತ್ಯಂತ ಅವಶ್ಯಕವಿರುವ ಮೂಲಭೂತ ಸೌಕರ್ಯಗಳಿಗೆ ಅವರು ಅನುದಾನ ನೀಡಿರುವ ಹಿನ್ನೆಲೆಯಲ್ಲಿ, ಪೂರ್ಣಗೊಂಡಿರುವ ಹಲವು ಕಾರ್ಯಕ್ರಮಗಳ ಲೋಕಾರ್ಪಣೆ, ಇನ್ನು ಕೆಲವನ್ನು ಪ್ರಾರಂಭ ಮಾಡುತ್ತಿದ್ದಾರೆ ಎಂದರು.

## ಪಪಂ ಮರು ಹರಾಜು : ಏರಿಕೆಯಾಗದ ಆದಾಯ



**ಜಗಳೂರು**

ಜಗಳೂರು, ಮಾ.10-ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ ಅಧ್ಯಕ್ಷೆ ವಿಶಾಲಾಕ್ಷಿ ಓಬಳೇಶ್ ಅವರ ಅಧ್ಯಕ್ಷತೆಯಲ್ಲಿ ಎರಡನೇ ಬಾರಿಗೆ ಬಹಿರಂಗ ಮರು ಹರಾಜು ಪ್ರಕ್ರಿಯೆ ನಡೆಯಿತು. ಈ ವೇಳೆ ಅನೇಕ ಬಿಡ್ ದಾರರು ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಗೂಡಂಗಡಿ ನೆಲಬಾಡಿಗೆ ತರಕಾರಿ ಮಾರುಕಟ್ಟೆ ಸುಂಕ ವಸೂಲಿ- 870000 ಎಚ್.ಉಮೇಶ್, ಖಾಸಗಿ ಬಸ್ ನಿಲ್ದಾಣ ಸುಂಕ ವಸೂಲಿ-140000 ಮಧುಸೂದನ್, ಕೋಳಿ, ಕಸಾಯಿಖಾನೆ, ಮೀನು ಮಾರಾಟ ಸುಂಕ ವಸೂಲಿ 85000 ಎಂ ಪ್ರಕಾಶ್ ಅವರಿಗೆ ಹರಾಜು ಆದವು.

ಪ.ಪಂ. ಮುಖ್ಯಾಧಿಕಾರಿ ಲೋಕ್ಯಾನಾಯ್ಕ ಮಾತನಾಡಿ, ಕಳೆದ ವರ್ಷಕಿಂತ ಕಡಿಮೆ ಆದಾಯ ಬಂದಿದೆ. ಹರಾಜು ಮೊತ್ತದ ಮಾಹಿತಿಯನ್ನು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು. ಅನುಮೋದನೆ ನೀಡಿದ ನಂತರ ಸುಂಕ ವಸೂಲಿ ಪ್ರಕ್ರಿಯೆ ಆರಂಭಕ್ಕೆ ಅವಕಾಶ ನೀಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ.ಪಂ. ಅಧ್ಯಕ್ಷೆ ವಿಶಾಲಾಕ್ಷಿ ಓಬಳೇಶ್, ಸದಸ್ಯರಾದ ರಮೇಶ್ ರೆಡ್ಡಿ , ಶಕೀಲ್ ಅಹಮ್ಮದ್, ಆರ್.ತಿಪ್ಪೇಸ್ವಾಮಿ, ಓಬಳೇಶ್, ಮುಖಂಡರಾದ ಓಬಳೇಶ್, ಶಿವಣ್ಣ, ರಮೇಶ್, ಕಂದಾಯ ನಿರೀಕ್ಷಕ ಮೋಹಿದ್ದೀನ್ ಸೇರಿದಂತೆ ಭಾಗವಹಿಸಿದ್ದರು.

6.97 ಲಕ್ಷ ರೂ ಆದಾಯ ಕೊರತೆ;- ಹಿಂದಿನ ವರ್ಷ17.92 ಲಕ್ಷ ರೂ ಆದಾಯ ಬಂದಿತ್ತು. ಮೂರೂ ಬಾಬುಗಳು ಸೇರಿ ಈ ವರ್ಷ 10.95ಲಕ್ಷ ರೂ.ಗೆ ಹರಾಜು ನಿಂತಿದೆ. ಅಂದರೆ 6.97ಲಕ್ಷರೂ ಆದಾಯ ಕಡಿಮೆಯಾಗುತ್ತದೆ.

ಹರಾಜು ಪ್ರಕ್ರಿಯೆಗೆ ಜಿಲ್ಲಾಧಿಕಾರಿಗಳು ಅನುಮೋದನೆ ನೀಡುತ್ತಾರೋ ಆದಾಯ ಕಡಿಮೆಯಾಗಿರುವುದರಿಂದ ಮರು ಹರಾಜಿಗೆ ಆದೇಶಿಸುತ್ತಾರೋ?ಕಾದು ನೋಡಬೇಕಿದೆ.

## ಎಂಐಎಫ್ಎಸ್ಇಯಲ್ಲಿ ಸುರಕ್ಷತಾ ದಿನಾಚರಣೆ





ದಾವಣಗೆರೆ, ಮಾ.10- ರಾಷ್ಟ್ರೀಯ ಸುರಕ್ಷತಾ ದಿನ ಕೇವಲ ದೇಶದಲ್ಲಿ ಮಾತ್ರವಲ್ಲದೆ ಇಡೀ ಪ್ರಪಂಚದೆಲ್ಲೆಡೆ ಈ ದಿನಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದಾರೆ.

ಮಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಫೈರ್ ಅಂಡ್ ಸೇಫ್ಟಿ ಇಂಜಿನಿಯರಿಂಗ್ ವಿದ್ಯಾಸಂಸ್ಥೆಯ ಆಡಳಿತ ವರ್ಗದವರು ಮತ್ತು ವಿದ್ಯಾರ್ಥಿಗಳಿಂದ ಕಾಲೇಜಿನ ಮುಖ್ಯಸ್ಥರಾದ ಶ್ರೀಮತಿ ಶೋಭಾ ಎಂ.ಎಸ್ ಮತ್ತು ಎಲ್ಡೋ ವರ್ಗೀಸ್ ಸೇಫ್ಟಿ ಮ್ಯಾನೇಜರ್ ಆರ್.ಕೆ. ಇನ್ಫ್ರಾ ಇಂಡಿಯ ಪ್ರೈ. ಲಿಮಿಟೆಡ್ ಮತ್ತು ರವಿಕುಮಾರ್ ಉಪನ್ಯಾಸಕರು, ಎಮ್‌ಐಎಫ್‌ಎಸ್‌ಇ ಸುರಕ್ಷತೆಯ ಜಾಗ್ರತೆಯನ್ನು ನೀಡುವ ಛಾಯಾಚಿತ್ರದ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಸುರಕ್ಷತಾ ದಿನಾಚರಣೆಯ ಮುಖ್ಯ ಉದ್ದೇಶವೇ ಅಪಘಾತ ನಿರ್ಮೂಲನೆ. ಕೆಲಸದ ಸ್ಥಳಗಳಲ್ಲಿ ಅಸುರಕ್ಷಿತ ಕಾರ್ಯ ಮತ್ತು ಸ್ಥಿತಿಯನ್ನು ಸುರಕ್ಷತಾ ಅಧಿಕಾರಿಗಳ ಮೂಲಕ ತಡೆಗಟ್ಟುವಲ್ಲಿ ಶೇ. 90 ರಷ್ಟು ಸುರಕ್ಷತೆ ಸಾಧ್ಯ. ಈ ಕಾರಣಕ್ಕಾಗಿ ಫೈರ್ ಅಂಡ್ ಸೇಫ್ಟಿ ಕೋರ್ಸ್ ಮಾಡಿದವರಿಗೆ ದೇಶ-ವಿದೇಶಗಳಲ್ಲಿ ಹೆಚ್ಚಿನ ಬೇಡಿಕೆಯಿದೆ ಎಂದು ವಿದ್ಯಾರ್ಥಿಗಳನ್ನು ಕುರಿತು ಮುಖ್ಯ ಅತಿಥಿಗಳು ತಿಳಿಸಿದರು. ಕಾರ್ಯಕ್ರಮದಲ್ಲಿ ಸಿಬ್ಬಂದಿ ವರ್ಗದವರಾದ ಆಶಾ ಬಿ. ಜಾನಗಿರಿ, ರವಿಕುಮಾರ್, ರಮೇಶ್ ಉಪಸ್ಥಿತರಿದ್ದರು.

## ಹೆಚ್.ಸಿ ಜಯಣ್ಣ ನಿಧನ



ದಾವಣಗೆರೆ ಎಸ್.ಎಸ್ ಬಡಾವಣೆ
'ಎ' ಬ್ಲಾಕ್ 6ನೇ ಕ್ರಾಸ್ ವಾಸಿ

**ಜಯಣ್ಣ ಹೆಚ್.ಸಿ**

ಇವರು ದಿನಾಂಕ 10.03.2023ರ ಶುಕ್ರವಾರ ಮಧ್ಯಾಹ್ನ 3.55 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 74 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಮೃತರ ಸ್ವಗೃಹದಲ್ಲಿ ಬೆಳಿಗ್ಗೆ 11 ಗಂಟೆಯವರಗೆ ಇಡಲಾಗುವುದು. ನಂತರ ಜೆಜೆಎಂ ಮೆಡಿಕಲ್ ಕಾಲೇಜಿಗೆ ಹಸ್ತಾಂತರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಮೊ : 94482 53494, 94494 22997

## ಕುಂಬಳೂರಿನ ಮುಳ್ಳೋತ್ಸವಕ್ಕೆ ಅಪಾರ ಜನಸ್ತೋಮ



ಮಲೇಬೆನ್ನೂರು, ಮಾ.10- ಕುಂಬಳೂರು ಗ್ರಾಮದ ಶ್ರೀ ಹನುಮಂತ ದೇವರ ರಥೋತ್ಸವದ ಅಂಗವಾಗಿ ಸ್ವಾಮಿಯ ಮುಳ್ಳೋತ್ಸವವು ಅಪಾರ ಭಕ್ತರ ಸಮ್ಮುಖದಲ್ಲಿ ಶ್ರದ್ಧಾ-ಭಕ್ತಿಯಿಂದ ಶುಕ್ರವಾರ ಸಂಜೆ ಜರುಗಿತು. ಮೊದಲಿಗೆ ಭೂತಪ್ಪನನ್ನು ಹೊತ್ತ ದಾಸಪ್ಪ, ಮುಳ್ಳು ತುಳಿದು ಮುಳ್ಳೋತ್ಸವಕ್ಕೆ ಚಾಲನೆ ನೀಡಿದರು. ನಂತರ ಹರಕೆ ಹೊತ್ತ ನೂರಾರು ಭಕ್ತರು, ಮುಳ್ಳು ತುಳಿದು ಭಕ್ತಿ ಸಮರ್ಪಿಸಿದರು.

ರಾತ್ರಿ ಕಂಕಣ ವಿಸರ್ಜನೆ ನಂತರ ಓಕಳಿ, ಭೂತಗಳ ಮಣೇವು ಸೇವೆ ನಡೆದವು.

## ಕೆ. ಬೇವಿನಹಳ್ಳಿ ಗ್ರಾ.ಪಂ ಅಧ್ಯಕ್ಷರಾಗಿ ವಿಜಯ್‌ಕುಮಾರ್



ಮಲೇಬೆನ್ನೂರು, ಮಾ.9- ಕೆ.ಬೇವಿನಹಳ್ಳಿ ಗ್ರಾ.ಪಂ ಅಧ್ಯಕ್ಷರಾಗಿ ಸಲಗನಹಳ್ಳಿಯ ಕೆ.ಡಿ.ವಿಜಯಕುಮಾರ್ ಅವರು ಗುರುವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಶ್ರೀಮತಿ ಮಂಜಮ್ಮ ಮಂಜಪ್ಪ ಅವರ ರಾಜೀನಾಮೆಯಿಂದಾಗಿ ಅಧ್ಯಕ್ಷ ಸ್ಥಾನ ತೆರವಾಗಿತ್ತು. ಪಿಡಿಓ ಲಕ್ಷ್ಮೀಬಾಯಿ ಸೇರಿದಂತೆ ಗ್ರಾ.ಪಂ.ನ ಎಲ್ಲಾ ಸದಸ್ಯರು ಈ ವೇಳೆ ಹಾಜರಿದ್ದರು.

## ನಗರದಲ್ಲಿ ಇಂದು ಪರಿಸರ ಸ್ನೇಹಿ ಉತ್ಪನ್ನಗಳ ಜಾಗೃತಿ ಜಾಥಾ

ಪೋದಾರ್ ಇಂಟರ್‌ನ್ಯಾಷನಲ್ ಸ್ಕೂಲ್ ವತಿಯಿಂದ ಇಂದು ಬೆಳಿಗ್ಗೆ 10 ರಿಂದ 12 ರವರೆಗೆ ಪರಿಸರ ಸ್ನೇಹಿ ಉತ್ಪನ್ನಗಳ ಬಗ್ಗೆ ಮಕ್ಕಳಿಂದ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ. ಹೈಸ್ಕೂಲ್ ಮೈದಾನದಿಂದ ಸೀತಮ್ಮ ಪದವಿ ಪೂರ್ವ ಕಾಲೇಜು, ಪಿ.ಬಿ. ರಸ್ತೆ, ಬಿಎಸ್ಸೆನ್ನೆಲ್ ಕಚೇರಿ, ಗಾಂಧಿ ವೃತ್ತ, ಅಶೋಕ ರಸ್ತೆ, ಜಯದೇವ ವೃತ್ತದ ವರೆಗೆ ಜಾಥ ನಡೆಯಲಿದೆ.

## ಪುಣ್ಯಸ್ಮರಣೆ



**ದಿ|| ಸವನೂರು ವೀರಪ್ಪನವರು**

ನಿಧನ : 11.03.1978

ತಮ್ಮ ಸ್ಮರಣೆಯಲ್ಲಿರುವ....

ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಮರಿಮೊಮ್ಮಕ್ಕಳು, ಸವನೂರು ವಂಶಸ್ಥರು ಹಾಗೂ ಬಂಧುಗಳು.

**ಎಸ್.ವಿ.ಸಿ. ಪ್ಲಾಜಾ, ದಾವಣಗೆರೆ.**

## ನಲ್ಕುಂದ ಹೆಚ್. ಜಯಪ್ಪ ನಿಧನ



ಜನನ: 03/02/1941 ಮರಣ:10/03/2023

ದಾವಣಗೆರೆ ತಾಲ್ಲೂಕು ನಲ್ಕುಂದ
ಗ್ರಾಮದ ವಾಸಿ
ಶ್ರೀ ನಾರದಮುನಿ ಸೇವಾ ಟ್ರಸ್ಟ್ (ರಿ.)
ಚಿಗಟೇರಿ ಉಪಾಧ್ಯಕ್ಷರಾದ

**ನಲ್ಕುಂದ ಹೆಚ್. ಜಯಪ್ಪ**

ಇವರು ದಿನಾಂಕ 10.03.2023ರ ಶುಕ್ರವಾರ ಸಂಜೆ 3.20 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 82 ವರ್ಷ ವಯಸ್ಸಾಗಿತ್ತು. ಧರ್ಮಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.03.2023ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ನಲ್ಕುಂದ ಗ್ರಾಮದ ಮೃತರ ಸ್ವಂತ ತೋಟದಲ್ಲಿ ನೆರವೇರಿಸಲಾಗುವುದು.

ದು:ಖತಪ್ತ ಕುಟುಂಬ ವರ್ಗ :
ಮೊ : 99452 09823

## ಮೋದಿ ಕ್ರೀಡಾಂಗಣದಲ್ಲಿ, ಮೋದಿಗೆ ಮೋದಿ ಚಿತ್ರ : ಕಾಂಗ್ರೆಸ್ ತರಾಟೆ

ನವದೆಹಲಿ, ಮಾ. 10 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನಿನ್ನೆ ಕ್ರಿಕೆಟ್ ಟೆಸ್ಟ್ ಪಂದ್ಯ ವೀಕ್ಷಣೆಗೆ ತೆರಳಿದಾಗ ಅವರದೇ ಚಿತ್ರವನ್ನು ಕೊಡುಗೆಯಾಗಿ ನೀಡಿದ್ದನ್ನು ಕಾಂಗ್ರೆಸ್ ಟೀಕಿಸಿದೆ.

ಪ್ರಧಾನಿ ಮೋದಿ ಹಾಗೂ ಆಸ್ಟ್ರೇಲಿಯಾದ ಪ್ರಧಾನಿ ಆಂಥೋನಿ ಅಲ್ಬಾನೀಸ್ ಅವರು ಭಾರತ ಮತ್ತು ಆಸ್ಟ್ರೇಲಿಯಾ ನಡುವೆ ಅಹಮದಾಬಾದ್‌ನಲ್ಲಿ ನಡೆದ ಪಂದ್ಯದ ವೀಕ್ಷಣೆಗೆ ತೆರಳಿದ್ದರು. ಆಸಕ್ತಿಕರ ಅಂಶವೆಂದರೆ ಈ ಕ್ರೀಡಾಂಗಣದ ಹೆಸರು ನರೇಂದ್ರ ಮೋದಿ ಸ್ಟೇಡಿಯಂ ಆಗಿದೆ.

ಈ ಸಂದರ್ಭದಲ್ಲಿ ಬಿ.ಸಿ.ಸಿ.ಐ. ಅಧ್ಯಕ್ಷ ರೋಜರ್ ಬಿನ್ನಿ ಅವರು ಅಲ್ಬಾನೀಸ್ ಅವರಿಗೆ ಅವರದೇ ಚಿತ್ರ ಹಾಗೂ ಕಾರ್ಯದರ್ಶಿ ಜಯ್ ಷಾ ಅವರು ಪ್ರಧಾನಿಗೆ ಅವರದೇ ಚಿತ್ರವನ್ನು ನೀಡಿದರು.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್, ಮೋದಿ ಅವರ ಸ್ನೇಹಿತನ ಪುತ್ರ ಮೋದಿಯವರಿಗೆ ಮೋದಿ ಚಿತ್ರವನ್ನು ಮೋದಿ ಕ್ರೀಡಾಂಗಣದಲ್ಲಿ ನೀಡಿದ್ದಾರೆ ಎಂದು ಹೇಳಿತ್ತು.

ಆದರೆ, ಈ ಕುರಿತ ವಿವಾದ ಅನಗತ್ಯ. ಕಳೆದ 75 ವರ್ಷಗಳಲ್ಲಿ ಕ್ರಿಕೆಟ್ ಆಡಿರುವ ಉಭಯ ದೇಶಗಳ ಕ್ರಿಕೆಟರ್‌ಗಳ ಚಿತ್ರಗಳನ್ನು ಉಭಯ ದೇಶಗಳ ಪ್ರಧಾನಿಗಳ ಚಿತ್ರವಾಗಿ ಜೋಡಿಸಿ ನೀಡಲಾಗಿದೆ ಎಂದು ಸರ್ಕಾರದ ಮೂಲಗಳು ಹೇಳಿವೆ.

## ಹೊನ್ನಾಳಿ : ಪ್ರಜಾಧ್ವನಿ ಸಮಾವೇಶದ ವೇದಿಕೆ ಪರಿಶೀಲಿಸಿದ ಪ್ರದೀಪ್‌ಗೌಡ



ಹೊನ್ನಾಳಿ, ಮಾ. 10- ಇಲ್ಲಿನ ಖಾಸಗಿ ಬಸ್ ನಿಲ್ದಾಣಕ್ಕೆ ಸಮೀಪದ ಪಟ್ಟಣಶೆಟ್ಟಿ ಫೀಲ್ಡ್‌ನಲ್ಲಿ ಪ್ರಜಾಧ್ವನಿ ಸಮಾವೇಶಕ್ಕೆ ಸಿದ್ಧಗೊಳ್ಳುತ್ತಿರುವ ಬೃಹತ್ ವೇದಿಕೆಯನ್ನು ಮುಖಂಡ ಡಿ.ಎಸ್. ಪ್ರದೀಪ್‌ಗೌಡ ಪರಿಶೀಲಿಸಿದರು.

ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ, ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ್, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಬಿ. ಝಡ್. ಜಮೀರ್ ಅಹಮ್ಮದ್ ಖಾನ್, ಜಯಕುಮಾರ್, ಬಸವರಾಜ ರಾಯರೆಡ್ಡಿ, ಪಿ.ಟಿ. ಪರಮೇಶ್ವರ್‌ನಾಯ್ಕ, ಮಧು ಬಂಗಾರಪ್ಪ ಇತರರು ಭಾಗವಹಿಸಲಿದ್ದಾರೆ.

ಸುಸಜ್ಜಿತ ವೇದಿಕೆ, ಅಚ್ಚುಕಟ್ಟಾದ ಭೋಜನ ವ್ಯವಸ್ಥೆಗೆ ಸಿದ್ಧತೆಗಳು ಭರದಿಂದ ಸಾಗಿವೆ ಎಂದು ತಿಳಿಸಿದರು. ತಾಲ್ಲೂಕು ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ರವೀಶ್ ನೇತೃತ್ವದಲ್ಲಿ ಈಗಾಗಲೇ ನಾನಾ ಸಭೆಗಳು ನಡೆದಿವೆ.

## ಹೆಚ್3ಎನ್2 ಎಚ್ಚರಿಕೆಗೆ ಪರಿಣಿತರ ಸಲಹೆ




ನವದೆಹಲಿ, ಮಾ. 10 – ಹೆಚ್3ಎನ್2 ವೈರಸ್ ಕಾರಣದಿಂದ ದೇಶದಲ್ಲಿ ಮೊದಲ ಎರಡು ಸಾವುಗಳು ಸಂಭವಿಸಿರುವುದು ದೃಢಪಟ್ಟಿದೆ. ಈ ವೈರಸ್ ಬಗ್ಗೆ ಆತಂಕ ಬೇಡ ಆದರೆ, ಎಚ್ಚರಿಕೆ ವಹಿಸಬೇಕಿದೆ ಎಂದು ಪರಿಣಿತರು ಹೇಳಿದ್ದಾರೆ.

ಕರ್ನಾಟಕದ 82 ವರ್ಷದ ವೃದ್ಧ ಹಾಗೂ ಹರಿಯಾಣದ 56 ವರ್ಷದ ಶ್ವಾಸಕೋಶ ಕ್ಯಾನ್ಸರ್ ವ್ಯಕ್ತಿಯೊಬ್ಬರು ಈ ವೈರಸ್ ಸೋಂಕಿಗೆ ಸಿಲುಕಿದ ನಂತರ ಸಾವನ್ನಪ್ಪಿದ್ದಾರೆ.

ಜನವರಿ 2ರ ನಂತರ ಇಲ್ಲಿಯವರೆಗೆ 451 ಹೆಚ್3ಎನ್2 ವೈರಸ್ ಸೋಂಕುಗಳು ದೃಢಪಟ್ಟಿವೆ. ಪರಿಸ್ಥಿತಿಯ ಮೇಲೆ ಕೇಂದ್ರ ಆರೋಗ್ಯ ಇಲಾಖೆ ನಿಗಾ ವಹಿಸಿದೆ.

ಈ ವೈರಸ್ ಸೋಂಕು ಲಕ್ಷಣಗಳು ಸಾಮಾನ್ಯ ಫ್ಲು ವೈರಸ್ ಸೋಂಕಿನ ರೀತಿಯಲ್ಲೇ ಇರುತ್ತವೆ. ಕೆಮ್ಮು, ಶೀತ, ಮೈ ಕೈ ನೋವು, ವಾಂತಿ ಹಾಗೂ ಭೇದಿಯಂತಹ ಲಕ್ಷಣಗಳು ಕಂಡು ಬರುತ್ತವೆ.

ಈ ವೈರಸ್ ಇನ್ನೊಂದು ಕೊರೊನಾ ಆಗಿ ಹರಡಬಹುದೇ ಎಂಬ ಕಳವಳವೂ ಇದೆ. ಆದರೆ, ಈ ಸೋಂಕು ದೊಡ್ಡ ಪ್ರಮಾಣದಲ್ಲಿ ಹರಡುವ ಸಾಧ್ಯತೆ ಕಂಡು ಬರುತ್ತಿಲ್ಲ ಎಂದು ತಜ್ಞ ವೈದ್ಯ ಅನುರಾಗ್ ಅಗರ್‌ವಾಲ್ ಹೇಳಿದ್ದಾರೆ.

ಹೆಚ್ಚು ಜನರು ಆಸ್ಪತ್ರೆಗೆ ದಾಖಲಾಗುತ್ತಿಲ್ಲ. ಸೋಂಕಿತರಲ್ಲಿ ಶೇ.5ರಷ್ಟು ಜನ ಮಾತ್ರ ಆಸ್ಪತ್ರೆಗೆ ಬರುತ್ತಿದ್ದಾರೆ ಎಂದು ಅಪೋಲೋ ಹಾಸ್ಪಿಟಲ್ಸ್‌ನ ಹಿರಿಯ ವೈದ್ಯರಾದ ತರುಣ್ ಸಹಾನಿ ಹೇಳಿದ್ದಾರೆ.

ಸೋಂಕಿತರಲ್ಲಿ ಬಹುತೇಕರು ನಿಧಾನವಾಗಿ ಚೇತರಿಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಕಳವಳ ಬೇಕಿಲ್ಲ ಎಂದು ಇನ್ಸಾಸ್ ಸಂಸ್ಥೆಯ ಸದಸ್ಯರಾದ ವೈರಾಣು ಪರಿಣಿತ ಉಪಾಸನ ರೇ ಹೇಳಿದ್ದಾರೆ.

ಈ ವೈರಸ್ ಜನವರಿಯಿಂದ ಮಾರ್ಚ್ ಅವಧಿಯಲ್ಲಿ ಕಂಡು ಬರುವುದು ಸಾಮಾನ್ಯ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಎರಡು ಮೂರು ಪಟ್ಟು ಹೆಚ್ಚಾಗಿ ಸೋಂಕು ಕಂಡು ಬರುತ್ತಿದೆ ಎಂದು ಸಹಾನಿ ತಿಳಿಸಿದ್ದಾರೆ.

ಕೊರೊನಾ ಸಮಸ್ಯೆ ಈಗ ಕಂಡು ಬರುತ್ತಿಲ್ಲ. ಆದರೆ, ಹೆಚ್3ಎನ್2, ಅಡಿನೊವೈರಸ್ ಹಾಗೂ ಹೆಚ್1ಎನ್1 ಮುಂತಾದ ವೈರಸ್ ಸೋಂಕು ದೇಶದಲ್ಲಿ ಕಂಡು ಬರುತ್ತಿವೆ.

## ಕೈಗಾರಿಕಾ ಉತ್ಪಾದನೆ ಹೆಚ್ಚಳ

ನವದೆಹಲಿ, ಮಾ. 10 – ಭಾರತದ ಕೈಗಾರಿಕಾ ಉತ್ಪಾದನೆ ಜನವರಿಯಲ್ಲಿ ಶೇ. 5.2ರಷ್ಟು ಹೆಚ್ಚಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಕಳೆದ ವರ್ಷ ಜನವರಿಯಲ್ಲಿ ಕೈಗಾರಿಕಾ ಬೆಳವಣಿಗೆ ದರ ಶೇ.2ರಷ್ಟಿತ್ತು. ಗಣಿ ವಲಯದಲ್ಲಿ ಶೇ.8.8 ಹಾಗೂ ವಿದ್ಯುತ್ ವಲಯದಲ್ಲಿ ಶೇ.12.7ರ ಬೆಳವಣಿಗೆ ಕಂಡು ಬಂದಿದೆ.

# ಬಿಎಸ್‌ವೈ ಬೆಂಬಲಿಗರಿಗೆ ಪ್ರಚಾರ ಸಮಿತಿಯಲ್ಲಿ ಮಣೆ

### ಸೋಮಣ್ಣ ಸೇರಿ ಹಲ ಪ್ರಮುಖರಿಗೆ ತಂಡದಲ್ಲಿ ಸ್ಥಾನವಿಲ್ಲ

ಬೆಂಗಳೂರು, ಮಾ. 10 - ಮಾಜಿ ಮುಖ್ಯ ಮಂತ್ರಿ ಬಿ.ಎಸ್. ಯಡಿ ಯೂರಪ್ಪ ಅವರನ್ನು ಓಲೈಸಿಕೊಳ್ಳಲು ಅವರ ಬೆಂಬಲಿಗರನ್ನೇ ಚುನಾವಣಾ ಪ್ರಚಾರ ಹಾಗೂ ನಿರ್ವಹಣಾ ಸಮಿತಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನಾಗಿ ಬಿಜೆಪಿ ವರಿಷ್ಠರು ನೇಮಕ ಮಾಡಿ ಆದೇಶಿಸಿದ್ದಾರೆ.

ಯಡಿಯೂರಪ್ಪ ಅವರ ಓಲೈಕೆ ಜತೆಗೆ ಅಸಮಾಧಾನಗೊಂಡು ಒಂದು ಹೆಜ್ಜೆ ಹೊರ ಹಾಕಿದ್ದವರನ್ನು ಪಕ್ಷದಲ್ಲೇ ಉಳಿಸಿಕೊಳ್ಳುವ ಉದ್ದೇಶ ದಿಂದ ಸಮಿತಿ ರಚನೆಯಲ್ಲಿ ರಾಜಕೀಯ ಚಾಣಾಕ್ಷತನ ಮೆರೆಯಲಾಗಿದೆ.

ಇದೇ ಸಮಯದಲ್ಲಿ ತಮ್ಮ ವಿರೋಧಿಗಳನ್ನು ಎರಡೂ ಸಮಿತಿಗಳಿಂದ ದೂರ ಇರಿಸುವಲ್ಲಿ ಬಿ. ಎಸ್.ವೈ. ಯಶಸ್ವಿಯಾಗಿದ್ದು, ವಸತಿ ಸಚಿವ ವಿ.ಸೋಮಣ್ಣ ಸೇರಿದಂತೆ ಕೆಲ ಪ್ರಮುಖ ನಾಯಕರನ್ನು ಈ ತಂಡಗಳಿಂದ ಹೊರಗಿಟ್ಟಿ ರುವುದು ಆಸಕ್ತಿಕರ ವಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಪ್ರಚಾರ ಸಮಿತಿ ರಚಿಸಲಾಗಿದ್ದು, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ನೇತೃತ್ವದಲ್ಲಿ ಚುನಾವಣಾ ನಿರ್ವಹಣಾ ಸಮಿತಿಯನ್ನು ರಚಿಸಿದ್ದಾರೆ.

ಬೊಮ್ಮಾಯಿ ಅವರ ನೇತೃತ್ವದ ಸಮಿತಿಯಲ್ಲಿ ಯಡಿಯೂರಪ್ಪ ಮತ್ತು ಅವರ ಪುತ್ರ ಬಿ.ವೈ.ವಿಜಯೇಂದ್ರ ಸದಸ್ಯರಿದ್ದಾರೆ. ತಂದೆ ಮತ್ತು ಮಗನಿಗೆ ಮತ್ತೊಂದು ಅಧಿಕಾರ ನೀಡುವ ಮೂಲಕ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಅವರನ್ನು ಸಕ್ರಿಯವಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಚುನಾವಣಾ ತಂತ್ರ ಹೆಣೆದಿದ್ದಾರೆ. ಮೈತ್ರಿ ಸರ್ಕಾರ ಕೆಡವಿ ಬಿಜೆಪಿ ಸರ್ಕಾರ ಬರಲು ಕಾರಣಕರ್ತರಾದ ರಮೇಶ್ ಜಾರಕಿಹೊಳಿ ಡಾ.ಕೆ. ಸುಧಾಕರ್, ಎಸ್.ಟಿ. ಸೋಮಶೇಖರ್ ಅವರಿಗೂ ಅವಕಾಶ ಮಾಡಿಕೊಡಲಾಗಿದೆ. ಇವರಷ್ಟೇ ಅಲ್ಲದೆ, ಆರ್.ಅಶೋಕ್, ಬಿ.ಶ್ರೀರಾಮುಲು, ಶೋಭ ಕರಂದ್ಲಾಜೆ. ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಅರವಿಂದ ಲಿಂಬಾವಳಿ, ಸಿ.ಸಿ.ಪಾಟೀಲ್, ಶಶಿಕಲಾ ಜೊಲ್ಲೆ ಅವರು ಯಡಿಯೂರಪ್ಪ ಅವರ ಒಡನಾಟದಲ್ಲಿ ಇರುವವರು.

ಜತೆಗೆ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮಾಜಿ ಮುಖ್ಯಮಂತ್ರಿಗಳಾದ ಡಿ.ವಿ.ಸದಾನಂದಗೌಡ, ಜಗದೀಶ್ ಶೆಟ್ಟರ್, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ಎ.ನಾರಾಯಣಸ್ವಾಮಿ, ಹಿರಿಯರಾದ ಕೆ.ಎಸ್.ಈಶ್ವರಪ್ಪ, ಗೋವಿಂದ ಕಾರಜೋಳ, ಪ್ರಭು ಚವ್ಹಾಣ್, ಸಿ.ಟಿ.ರವಿ, ವಿ.ಶ್ರೀನಿವಾಸಪ್ರಸಾದ್, ಪಿ.ಸಿ.ಮೋಹನ್, ಲಕ್ಷ್ಮಣ ಸವದಿ, ಚಲುವಾದಿ ನಾರಾಯಣಸ್ವಾಮಿ ಅವರು ಸಮಿತಿ ಸದಸ್ಯರಾಗಿದ್ದಾರೆ.

ಈ ಮಧ್ಯೆ ರಾಜ್ಯ ಚುನಾವಣಾ ನಿರ್ವಹಣಾ ಸಮಿತಿಗೆ ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ ಅವರನ್ನು ಸಂಚಾಲಕರನ್ನಾಗಿ ನೇಮಿಸಲಾಗಿದ್ದು, ಕೇಂದ್ರ ಸಚಿವರಾದ ಭಗವಂತ ಖೂಬಾ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಸಚಿವರಾದ ಕೋಟಾ ಶ್ರೀನಿವಾಸ ಪೂಜಾರಿ, ಮಾಜಿ ಸಚಿವರಾದ ಅರವಿಂದ ಲಿಂಬಾವಳಿ, ವಿಧಾನಪರಿಷತ್ತಿನ ಮಾಜಿ ಸಭಾಪತಿಗಳಾದ ರಘುನಾಥರಾವ್ ಮಲ್ಕಾಪುರೆ, ಪಕ್ಷದ ಉಪಾಧ್ಯಕ್ಷರಾದ ನಿರ್ಮಲ ಕುಮಾರ್ ಸುರಾನಾ, ತೇಜಸ್ವಿನಿ ಅನಂತಕುಮಾರ್, ಪ್ರಧಾನ ಕಾರ್ಯದರ್ಶಿಗಳಾದ ಎನ್.ರವಿಕುಮಾರ್, ಸಿದ್ಧರಾಜು, ಅಶ್ವತ್ಥ ನಾರಾಯಣ, ಮಹೇಶ್ ತೆಂಗಿನಕಾಯಿ, ಪಕ್ಷದ ಕಾರ್ಯದರ್ಶಿ ಎಸ್. ಕೇಶವ ಪ್ರಸಾದ್, ವಿಧಾನಪರಿಷತ್ ಸದಸ್ಯರಾದ ಛಲವಾದಿ ನಾರಾಯಣಸ್ವಾಮಿ ಮತ್ತು ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷರಾದ ಗೀತಾ ವಿವೇಕಾನಂದ ಅವರುಗಳನ್ನು ನಿರ್ವಹಣಾ ಸಮಿತಿಯ ಸದಸ್ಯರಾಗಿ ನೇಮಿಸಲಾಗಿದೆ.

### ನಾನು ನಿಂತ ನೀರಲ್ಲ ಎಂದ ಸೋಮಣ್ಣ



ಬೆಂಗಳೂರು, ಮಾ. 10 - ಮುಂ ಬರುವ ವಿಧಾನಸಭೆ ಚುನಾವಣೆಗೆ ಸಂಬಂಧಿಸಿದಂತೆ ಪ್ರಚಾರ ಹಾಗೂ ನಿರ್ವಹಣಾ ಸಮಿತಿ ನೇಮಕಗೊಳ್ಳುತ್ತಿದ್ದಂತೆ, ನಾನು ನಿಂತ ನೀರಲ್ಲ, ಹರಿಯುವ ನೀರು ಎಂದು ವಸತಿ ಸಚಿವ ವಿ.ಸೋಮಣ್ಣ ಅಸಮಾಧಾನ ಹೊರಹಾಕಿದ್ದಾರೆ. ಎರಡೂ ಸಮಿತಿಗಳಲ್ಲೂ ಯಡಿಯೂರಪ್ಪ ಬೆಂಬಲಿಗರಿಗೆ ಮಣೆ ಹಾಕಿ, ಅವರ ವಿರೋಧಿಗಳನ್ನು ದೂರ ಇಟ್ಟಿರುವುದು, ಸೋಮಣ್ಣ ಸೇರಿದಂತೆ ಕೆಲವರ ಕೆಂಗಣ್ಣಿಗೆ ಗುರಿಯಾಗಿದೆ.

ಸುದ್ದಿಗಾರರೊಂದಿಗೆ ಮಾತ ನಾಡಿದ ಸೋಮಣ್ಣ, ಹೊಟ್ಟೆಪಾಡಿಗಾಗಿ ನಾನೇನೂ ಮಾಡಬೇಕಿಲ್ಲ. ವದಂತಿ ಗಳನ್ನು ಯಾರು ಹಬ್ಬಿಸಿ ಅದಕ್ಕೆ ಉಪ್ಪುಖಾರ ಹಾಕುತ್ತಿದ್ದಾರೋ ಅವರನ್ನೇ ಈ ಸಂಬಂಧ ಕೇಳಬೇಕು. ನನ್ನ ವಿಚಾರಗಳನ್ನು ನಾನು ರಾಜ್ಯ ನಾಯಕರಿಗೆ ಮತ್ತು ಹೈಕಮಾಂಡ್‌ಗೆ ತಿಳಿಸಿದ್ದೇನೆ ಎಂದರು.

ಬಿಜೆಪಿ ತೊರೆಯುವ ವಿಚಾರದ ಕುರಿತು ಸ್ಪಷ್ಟವಾದ ನಿಲುವು ವ್ಯಕ್ತಪಡಿಸದೇ ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಮಾತನಾಡಿದರು. ಯಾವುದೇ ದೇವಸ್ಥಾನಗಳಿಗೆ ರಾಜಕಾರಣ ಮಾಡಲು ಹೋಗುವುದಿಲ್ಲ. ಅಲ್ಲಿ ಒಂದೇ ಒಂದು ರಾಜಕೀಯ ಸಭೆಯನ್ನೂ ನಾನು ಮಾಡುವುದಿಲ್ಲ. ಸಾವಿರಾರು ಜನ ಬರುತ್ತಾರೆ, ಹೋಗುತ್ತಾರೆ. ನಾವು ಇಲ್ಲೆಲ್ಲಾ ರಾಜಕಾರಣ ಮಾಡುವುದು ಸರಿಯಲ್ಲ. ಚುನಾವಣೆಗೂ ದೇವಾಲಯ ಉದ್ಘಾಟನೆಗೂ ಸಂಬಂಧ ಕಲ್ಪಿಸಬೇಡಿ ಎಂದು ಹೇಳಿದರು.

## ರಾಷ್ಟ್ರೀಯ ಕಾನೂನು ವಿ.ವಿ.ಗಳ ಶೇ.20 ವಿದ್ಯಾರ್ಥಿಗಳು ವಕೀಲರಾಗುತ್ತಿಲ್ಲ

ಪಣಜಿ, ಮಾ. 10 – ದೇಶದ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾನಿಲಯಗಳ ಶೇ.20ರಷ್ಟು ವಿದ್ಯಾರ್ಥಿಗಳೂ ಸಹ ವಕೀಲ ವೃತ್ತಿಗೆ ಬರುತ್ತಿಲ್ಲ ಎಂದು ಭಾರತೀಯ ವಕೀಲರ ಒಕ್ಕೂಟದ ಅಧ್ಯಕ್ಷ ಎಂ.ಕೆ. ಮಿಶ್ರಾ ವಿಷಾದಿಸಿದ್ದಾರೆ.

ಕಾನೂನು ಶಿಕ್ಷಣ ಕುರಿತು ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಕಾನೂನು ವಿಶ್ವವಿದ್ಯಾನಿಲಯಗಳ ಬಹುತೇಕ ವಿದ್ಯಾರ್ಥಿಗಳು ಕಾರ್ಪೊರೇಟ್ ಉದ್ಯಮಗಳಲ್ಲಿ ಕೆಲಸ ಪಡೆಯುವುದರ ಬಗ್ಗೆ ಆಸಕ್ತಿ ಹೊಂದಿರುತ್ತಾರೆ ಎಂದಿದ್ದಾರೆ.

ಎನ್.ಎಲ್.ಯು.ನ ಶೇ.20ರಷ್ಟು ವಿದ್ಯಾರ್ಥಿಗಳೂ ಸಹ ವಕೀಲ ವೃತ್ತಿಗೆ ಬರುತ್ತಿಲ್ಲ. ಇದು ನಿಜಕ್ಕೂ ನಿರಾಶಾದಾಯಕ ಎಂದಿದ್ದಾರೆ. ಅಲ್ಲದೇ, ಕಾನೂನು ವಲಯದ ಹಲವಾರು ಪ್ರಮುಖರು ನ್ಯಾಯಮೂರ್ತಿಗಳಾಗುವ ಅವಕಾಶವನ್ನು ನಯವಾಗಿ ತಳ್ಳಿ ಹಾಕುತ್ತಿದ್ದಾರೆ. ಅವರು ವಕೀಲರಾಗಿಯೇ ಮುಂದುವರೆಯಲು ಬಯಸುತ್ತಿದ್ದಾರೆ ಎಂದೂ ಮಿಶ್ರಾ ಹೇಳಿದ್ದಾರೆ.

## ಗೊಬ್ಬರಕ್ಕೆ ಜಾತಿ ಕೇಳುವುದಕ್ಕೆ ವಿರೋಧ

ಮುಂಬೈ, ಮಾ. 10- ರಸಗೊಬ್ಬರ ಖರೀದಿ ಗಾಗಿ ರೈತರು ತಮ್ಮ ಜಾತಿ ತಿಳಿಸುವಂತೆ ಕೇಂದ್ರ ಸರ್ಕಾರ ಕೇಳುತ್ತಿದೆ ಎಂದು ಮಹಾರಾಷ್ಟ್ರ ವಿಧಾನಸಭೆಯಲ್ಲಿ ಶಾಸಕರು ಆಕ್ಷೇಪಿಸಿದ್ದಾರೆ.

ಪ್ರತಿಪಕ್ಷದ ನಾಯಕ ಅಜಿತ್ ಪವಾರ್ ವಿಧಾನಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ್ದು, ಸಾಂಗ್ಲಿಯ ರೈತರು ರಸಗೊಬ್ಬರ ಪಡೆಯಲು ಕೇಂದ್ರದ ಪೋರ್ಟಲ್‌ನಲ್ಲಿ ಜಾತಿ ತಿಳಿಸಬೇಕೆಂದು ಕೇಳಲಾಗುತ್ತಿದೆ ಎಂದರು.

ಈ ಬಗ್ಗೆ ಮಾತನಾಡಿದ ಕಾಂಗ್ರೆಸ್ ಶಾಸಕ ಪೃಥ್ವಿರಾಜ್ ಚವಾಣ್, ಇದು ಸಾಂಗ್ಲಿಗೆ ಸೀಮಿತವಾಗಿಲ್ಲ. ರಾಜ್ಯದ ಇತರೆ ಭಾಗಗಳ ರೈತರೂ ಸಹ ಗೊಬ್ಬರಕ್ಕಾಗಿ ಜಾತಿ ತಿಳಿಸುವಂತೆ ಕೇಳಲಾಗುತ್ತಿದೆ ಎಂದರು. ಈ ಬಗ್ಗೆ ಪ್ರತಿ ಕ್ರಿಯಿಸಿರುವ ಮುಖ್ಯಮಂತ್ರಿ ಏಕನಾಥ ಶಿಂಧೆ, ಜಾತಿ ಕಾಲಂ ತೆಗೆದು ಹಾಕುವಂತೆ ಕೇಂದ್ರ ಸರ್ಕಾರವನ್ನು ಕೇಳಲಾಗುವುದು ಎಂದಿದ್ದಾರೆ.

## ಬಿಜೆಪಿ ಆಡಳಿತದಿಂದ ಸಂವಿಧಾನ, ಪ್ರಜಾಪ್ರಭುತ್ವಕ್ಕೆ ದಕ್ಕೆ

(1ನೇ ಪುಟದಿಂದ) ಎಂದು ಹೇಳುವವರು. ಶೋಷಿತರಿಗೆ ಸಾಮಾಜಿಕ ನ್ಯಾಯ ಸಿಕ್ಕಿದೇನಾ? ಬಿಜೆಪಿ ಪಕ್ಷದ ಆಡಳಿತದಲ್ಲಿ 5 ವರ್ಷದಲ್ಲಿ ಪರಿಶಿಷ್ಟ ಸಮುದಾಯದವರಿಗೆ 27 ಸಾವಿರ ಕೋಟಿ ಮಾತ್ರ ಆದರೆ ನಮ್ಮ ಆಡಳಿತಾವಧಿಯಲ್ಲಿ 88 ಸಾವಿರ ಕೋಟಿ ಅನುದಾನ. ಇದಜ್ಜೆ ರಾಜಕೀಯ ಇಚ್ಛಾಶಕ್ತಿ ಬದ್ದತೆ ಅಗತ್ಯ ಎಂದರು.

ಜಗಳೂರಿಗೆ ಕಾಂಗ್ರೆಸ್ ಪಕ್ಷದ ಆಡಳಿತಾವಧಿಯಲ್ಲಿ 15 ಸಾವಿರ ಮನೆಗಳನ್ನು ನೀಡಿದ್ದೆವು. ಅಲ್ಲದೆ ಬಿಜೆಪಿ ಆಡಳಿತ ಸರ್ಕಾರ ನಾವು ಮಂಜೂರು ಮಾಡಿ ದ ಕಾಮಗಾರಿಗಳ ಉದ್ಘಾಟನೆಗೆ ಸೀಮಿತವಾಗಿದ್ದಾರೆ. ಇಂದಿರಾ ಕ್ಯಾಂಟಿನ್ ಮುಚ್ಚಿದ್ದಾರೆ ಬಡವರ ಬಗ್ಗೆ ಇವರಿಗೆ ಕಾಳಜಿ ಇಲ್ಲ ಎಂದು ಟೀಕಿಸಿದರು.

ಪಕ್ಷದಲ್ಲಿ ಆಕಾಂಕ್ಷಿಗಳಾಗುವುದು ತಪ್ಪಲ್ಲ ಹೈಕಮಾಂಡ್‌ನವರು ಟಿಕೆಟ್ ಕೊಟ್ಟ ಅಭ್ಯರ್ಥಿ ಗೆಲುವಿಗೆ ಶ್ರಮಿಸುವುದು ಪ್ರಮುಖವಾಗಿದೆ. ಜಗಳೂರು ಕ್ಷೇತ್ರವನ್ನು 3 ಬಾರಿ ಸಮೀಕ್ಷೆ ನಡೆಸಿದ್ದು, ಯಾರ ಪರ ವರದಿ ಬರುತ್ತದೆ ಅವರಿಗೆ ಟಿಕೆಟ್ ಖಚಿ ತ. ಎಲ್ಲರೂ ಒಗ್ಗಟ್ಟಿನಿಂದ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಬೇಕು. ಬಿಜೆಪಿ ಶಾಸಕ ಎಸ್.ವಿ.ರಾಮಚಂದ್ರ ಅವರನ್ನು ಸೋಲಿಸಿ ಎಂದು ಕರೆ ನೀಡಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮ್ಮದ್ ಮಾತನಾಡಿ, ಬೆಳಗಾಂನಿಂದ ಉದ್ಘಾಟನೆಯಾದ ಪ್ರಜಾಧ್ವನಿ ಕಾರ್ಯಕ್ರಮ ವಿವಿಧ ಜಿಲ್ಲೆಗಳಲ್ಲಿ ಜನತೆಯ ಯಶಸ್ವಿ ಬೆಂಬಲದಿಂದ ಸಂಚರಿಸಿ ಇಂದು ತಮ್ಮ ಕ್ಷೇತ್ರದಲ್ಲಿದೆ. ಜಗಳೂರು ಕ್ಷೇತ್ರದಲ್ಲಿ ಕಾಂಗ್ರೆಸ್ ದಾವಣಗೆರೆ ಜಿಲ್ಲೆಯ 7 ಕ್ಷೇತ್ರಗಳಲ್ಲೂ ಕಾಂಗ್ರೆಸ್ ಜಯಭೇರಿ ನಿಶ್ಚಿತ ಎಂದರು.

ಕಾಂಗ್ರೆಸ್ ಪಕ್ಷದವರು ಕೇವಲ ಅಧಿಕಾರಕ್ಕಾಗಿ ಮಾತ್ರವಲ್ಲ ಸಮಾಜದ ಎಲ್ಲಾ ವರ್ಗಗಳಿಗೂ ನ್ಯಾಯ ಕಲ್ಪಿಸುವ ಹಾಗೂ ದೇಶಕ್ಕಾಗಿ ತ್ಯಾಗ ಬಲಿದಾನದ ಪ್ರತೀಕದ ಸಿದ್ದಾಂತವಿದೆ. ದೇಶದಲ್ಲಿ ಭ್ರಷ್ಟಾಚಾರದ ಕೂಪದಲ್ಲಿರುವ ಬಿಜೆಪಿಗೆ ಯಾವುದೇ ಸಿದ್ದಾಂತವಿಲ್ಲ. ಅಮಿತ್ ಷಾ, ಮೋದಿ ನೂರು ಬಾರಿ ಕರ್ನಾಟಕಕ್ಕೆ ಆಗಮಿಸಿದರೂ ಬಿಜೆಪಿ ಸೋಲು ಖಚಿತ, ಅಳಿ ತಪ್ಪಿದ ಡಬಲ್ ಇಂಜಿನ್ ಸರ್ಕಾರ ಕಿತ್ತೊಗೆಯಲು ಜನ ಸಂಕಲ್ಪ ಮಾಡಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮಾತನಾಡಿ, ಪ್ರಜಾಧ್ವನಿ ಕಾರ್ಯಕ್ರಮಕ್ಕೆ ಅಧಿಕ ಜನರು ಬೆಂಬಲ ವ್ಯಕ್ತಪಡಿಸಿದ್ದು, ಕಾಂಗ್ರೆಸ್ ಅಲೆ ಬೀಸಿದೆ. ಜಿಲ್ಲೆಯ ಪ್ರತಿ ಕ್ಷೇತ್ರದಲ್ಲೂ ಗೆಲುವು ಸಾಧಿಸಲು ಉತ್ತಮ ಅಭ್ಯರ್ಥಿಗಳಿಗೆ ಟಿಕೆಟ್ ನೀಡುವ ಅಗತ್ಯವಿದೆ. ಕಾಂಗ್ರೆಸ್ ಸೋಲಿಗೆ ಕಾರಣ ಕಾಂಗ್ರೆಸ್ ಪಕ್ಷದವರಾಗಿದ್ದು ಟಿಕೆಟ್ ಸಿಗದಿದ್ದವರು ಬೇಸರವಾಗದೆ ಒಗ್ಗಟ್ಟಿನಿಂದ ಪಕ್ಷದ ಗೆಲುವಿಗೆ ಕೈಜೋಡಿಸಬೇಕು ಎಂದು ಆಕಾಂಕ್ಷಿಗಳಿಂದ ವಾಗ್ದಾನ ಪಡೆದರು.

ಮಾಜಿ ಶಾಸಕ ಎಚ್.ಪಿ. ರಾಜೇಶ್ ಮಾತನಾಡಿ, ನಾನು ಶಾಸಕನಾಗಿದ್ದ ವೇಳೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರೂ.3330 ಕೋಟಿ ಅನುದಾನ ನೀಡಿ, ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಆಡಳಿತಾವಧಿಯಲ್ಲಿ 57 ಕೆರೆ ತುಂಬಿಸುವ ಯೋಜನೆಗೆ ಸಿರಿಗೆರೆ ಶ್ರೀಗಳ ಆಶೀರ್ವಾದ ತರಳಬಾಳು ಹುಣ್ಣಿಮೆ ಸಂದರ್ಭದಲ್ಲಿ ರೂ. 250 ಕೋಟಿ ಬಜೆಟ್‌ನಲ್ಲಿ ಮೀಸಲಿಟ್ಟಿದ್ದು, ಕಾಂಗ್ರೆಸ್ ಪಕ್ಷದ ಆಡಳಿತಾವಧಿಯಲ್ಲಿ ಎಂಬುದನ್ನು ನಾವು ಮರೆಯಬಾರದು ಎಂದರು.

ಜಗಳೂರು ಕ್ಷೇತ್ರದ ಕಾಂಗ್ರೆಸ್ ಪಕ್ಷದಲ್ಲಿ ಬಹಳ ಜನ ಆಕಾಂಕ್ಷಿಗಳಿರಬಹುದು. ಆದರೆ ನಾವೆಲ್ಲರೂ ಒಂದೇ ಕುಟುಂಬದವರಾಗಿದ್ದು, ಯಾರಿಗೆ ಟಿಕೆಟ್ ಸಿಗಲಿ ಮುಂದಿನ ಭವಿಷ್ಯಕ್ಕಾಗಿ ವೈಮನಸ್ಸು ತೊರೆದು ಗೆಲುವಿಗೆ ಶ್ರಮಿಸಬೇಕು ಎಂದು ಕರೆ ನೀಡಿದರು. ಕೆಪಿಸಿಸಿ ಎಸ್‌ಟಿ ಘಟಕದ ಅಧ್ಯಕ್ಷ ಕೆ.ಪಿ.ಪಾಲಯ್ಯ, ಮುಖಂಡರಾದ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ, ಕೆಪಿಸಿಸಿ ರಾಜ್ಯ ಕಾರ್ಯದರ್ಶಿ ಅಸಗೋಡು ಜಯಸಿಂಹ, ಪ್ರಕಾಶ್ ರಾಥೋಡ್ ಮಾತನಾಡಿದರು.

ಸಭೆಯಲ್ಲಿ ಕೆಪಿಸಿಸಿ ವಕ್ತಾರ ಡಿ.ಬಸವರಾಜ್, ಜಯದೇವನಾಯ್ಕ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಚ್. ಬಿ.ಮಂಜಪ್ಪ, ಕೆಪಿಸಿಸಿ ತಾಲ್ಲೂಕು ಉಸ್ತುವಾರಿ ಕಲ್ಲೇಶ್ ರಾಜ್ ಪಟೇಲ್, ಯುವ ಕಾಂಗ್ರೆಸ್‌ನ ರಕ್ಷಾ ರಾಮಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಮುಖಂಡ ರಾದ ಬಸವಾಪುರ ರವಿಚಂದ್ರ, ಹನುಮಂತಪ್ಪ, ಪಲ್ಲಾಗಟ್ಟೆ ಶೇಖರಪ್ಪ, ತಿಪ್ಪೇಸ್ವಾಮಿಗೌಡ, ಎಲ್. ಬಿ.ಭೈರೇಶ್, ಸುರೇಶ್ ಗೌಡ, ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ರಾಜ್ಯ ಮಟ್ಟದ ಮಹಿಳಾ ಬ್ಯಾಂಕ್ ಉದ್ಯೋಗಿಗಳ ಸಮಾವೇಶ

ಕರ್ನಾಟಕ ಪ್ರದೇಶ ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನ್ ವತಿಯಿಂದ ಕುವೆಂಪು ಕನ್ನಡ ಭವನದಲ್ಲಿ ಇಂದು 6ನೇ ರಾಜ್ಯ ಮಟ್ಟದ ಮಹಿಳಾ ಬ್ಯಾಂಕ್ ಉದ್ಯೋಗಿಗಳ ಸಮಾವೇಶ ನಡೆಯಲಿದೆ ಎಂದು ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ರಾಘವೇಂದ್ರ ನಾಯರಿ ತಿಳಿಸಿದ್ದಾರೆ.

ಬೆಳಿಗ್ಗೆ 9 ಘಂಟೆಗೆ ಗುಂಡಿ ವೃತ್ತದಿಂದ ಕುವೆಂಪು ಕನ್ನಡ ಭವನದವರೆಗೆ ಪ್ರತಿನಿಧಿಗಳ ಮೆರವಣಿಗೆ, 9.45 ಕ್ಕೆ ಎಐಬಿಇಎ ಸಂಘದ ಧ್ವಜಾರೋಹಣ. ಬೆಳಿಗ್ಗೆ 10 ಘಂಟೆಗೆ ಸಮಾವೇಶ ನಡೆಯುವುದು. ಅಧ್ಯಕ್ಷತೆಯನ್ನು ಕೆಪಿಬಿಇಎಫ್ ಮಹಿಳಾ ಸಮಿತಿಯ ಅಧ್ಯಕ್ಷೆ ಆರ್.ಎಸ್.ಸುಮತಿ ವಹಿಸುವರು. ಉದ್ಘಾಟಕರಾಗಿ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಹೆಚ್.ವೆಂಕಟಾಚಲಂ, ಮುಖ್ಯ ಅತಿಥಿಗಳಾಗಿ ಲೇಖಕಿ ಹೆಚ್.ಜಿ.ಜಯಲಕ್ಷ್ಮಿ, ಎಐಬಿಇಎ ನ ಜಂಟಿ ಕಾರ್ಯದರ್ಶಿ ಲಲಿತಾ ಜೋಷಿ ಆಗಮಿಸುವರು.

ಕರ್ನಾಟಕ ಪ್ರದೇಶ ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನ್‌ನ ಅಧ್ಯಕ್ಷ ಎಂ.ಎಸ್.ಶ್ರೀನಿವಾಸನ್, ಪ್ರಧಾನ ಕಾರ್ಯದರ್ಶಿ ಎಂ.ಜಯನಾಥ್, ಮಹಿಳಾ ಕೌನ್ಸಿಲ್‌ನ ಸಂಚಾಲಕಿ ಶ್ರೀಲತಾ ಕುಲಕರ್ಣಿ, ಕೆಪಿಬಿಇಎಫ್‌ನ ಮಾಜಿ ಅಧ್ಯಕ್ಷ ಹೆಚ್.ವಸಂತ ರೈ ಉಪಸ್ಥಿತರಿರುವರು.

## ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ದಾವಣಗೆರೆ, ಮಾ.9 - ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ ಮೆಟ್ರಿಕ್ ನಂತರದ ವಿವಿಧ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ಮಾರ್ಚ್ 15 ರವರೆಗೆ ವಿಸ್ತರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.

# ಅಣಜಿಯಲ್ಲಿ ಇಂದಿನಿಂದ ಕೆರೆ ಹೊನ್ನಮ್ಮ ದೇವಿಯ ದೊಡ್ಡ ಜಾತ್ರೆ



ದಾವಣಗೆರೆ ತಾಲ್ಲೂಕಿನ ಅಣಜಿ ಗ್ರಾಮದಲ್ಲಿ ಇಂದಿನಿಂದ ನಾಡಿದ್ದು 13 ರವರೆಗೆ ಶ್ರೀ ಕೆರೆ ಹೊನ್ನಮ್ಮ ದೇವಿಯ ದೊಡ್ಡಜಾತ್ರೆ ಹಾಗೂ ಭಾರೀ ಜಂಗೀ ಕುಸ್ತಿಗಳು ನಡೆಯಲಿವೆ.

ಇಂದು ಬೆಳಿಗ್ಗೆ 8 ರಿಂದದ ಗ್ರಾಮದಲ್ಲಿ ಅಮ್ಮನವರ ದೇವಸ್ಥಾನದಿಂದ ಕೇಲುಗಳನ್ನು ನಡೆ ಮುಡಿಯಿಂದ ಉತ್ಸವ ಮತ್ತು ಭಾಜಾ ಭಜಂತ್ರಿಯಿಂದ ಕೆರೆಗೆ ಕರೆದೊಯ್ಯಲಾಗುವುದು.

ನಂತರ ಮಧ್ಯಾಹ್ನ 2.30 ಕ್ಕೆ ದೇವಸ್ಥಾನದ ಆವರಣದಲ್ಲಿ ಭಾರೀ ಜಂಗೀ ಕುಸ್ತಿಗಳ ಉದ್ಘಾಟನಾ ಸಮಾರಂಭ ನಡೆಯಲಿದೆ.

ಹೆಬ್ಬಾಳು ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶಾಸಕ ಪ್ರೊ. ಎನ್. ಲಿಂಗಣ್ಣ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕರಾದ ಎಸ್.ಎ. ರವೀಂದ್ರನಾಥ್, ಎಸ್.ವಿ. ರಾಮಚಂದ್ರ, ಜಿಲ್ಲಾ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಅಣಜಿ ಗ್ರಾ.ಪಂ. ಅಧ್ಯಕ್ಷೆ ಪುಷ್ಪ ದೇವೇಂದ್ರಪ್ಪ, ವಾಲ್ಮೀಕಿ ಸಮಾಜದ ಜಿಲ್ಲಾಧ್ಯಕ್ಷ ಬಿ. ವೀರಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಎಸ್.ಕೆ. ಚಂದ್ರಶೇಖರ್, ಶ್ರೀ ಕೆರೆ ಹೊನ್ನಮ್ಮ ವಿದ್ಯಾಸಂಸ್ಥೆ ಕಾರ್ಯದರ್ಶಿ ಪಿ.ಎನ್. ಪ್ರಕಾಶ್ ಪಟೇಲ್ ಭಾಗವಹಿಸಲಿದ್ದಾರೆ.

ನಾಳೆ ದಿನಾಂಕ 12 ರಂದು ಅಮ್ಮನವರಿಗೆ ಅಭಿಷೇಕ, ಪೂಜೆ, ಭಕ್ತಾದಿಗಳಿಂದ ಹಣ್ಣು-ಕಾಯಿ, ಎಡೆ ಸಮರ್ಪಣೆ, ಬೆಳಿಗ್ಗೆ 10 ರಿಂದ 12.30 ರವರೆಗೆ ಮತ್ತು ಮಧ್ಯಾಹ್ನ 2.30 ರಿಂದ ಸಂಜೆ 6.30 ರವರೆಗೆ ಭಾರೀ ಜಂಗೀ ಕುಸ್ತಿಗಳು ನಡೆಯಲಿವೆ. ರಾತ್ರಿ 9.30 ರಿಂದ ಶ್ರೀ ದಿಗಂಬರೇಶ್ವರ ಸಂಗೀತ ನಾಟಕ ಮಂಡಳಿ ಅಣಜಿ ಇವರಿಂದ 'ಶ್ರೀ ಶಿವಶರಣೆ ಕೆರೆ ಹೊನ್ನಮ್ಮ' ಐತಿಹಾಸಿಕ ನಾಟಕ ಪ್ರದರ್ಶನ ಇರುತ್ತದೆ.

## ದೆಹಲಿ ಅಬಕಾರಿ ಪ್ರಕರಣದಲ್ಲಿ ಕಿಕ್‌ಬ್ಯಾಕ್

ನವದೆಹಲಿ, ಮಾ. 10 – 290 ಕೋಟಿ ರೂ.ಗಳಿಗೂ ಹೆಚ್ಚಿನ ಕಿಕ್‌ಬ್ಯಾಕ್ ಹಾಗೂ ಅಪರಾಧದ ಉದ್ದೇಶದಿಂದ ದೆಹಲಿ ಮಾಜಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯ ಮತ್ತಿತರರು ದೋಷಪೂರಿತ ಅಬಕಾರಿ ನೀತಿ ರೂಪಿಸಿದ್ದರು ಎಂದು ಜಾರಿ ನಿರ್ದೇಶನಾಲಯ ಆರೋಪಿಸಿದೆ. ನ್ಯಾಯಾಲಯದ ಎದುರು ಈ ಮಾಹಿತಿ ದಾಖಲಿಸಿರುವ ಜಾರಿ ನಿರ್ದೇಶನಾಲಯ, ತನಿಖೆಯ ವೇಳೆ ಇನ್ನಷ್ಟು ಅಕ್ರಮದ ಮಾಹಿತಿ ದೊರೆಯಬಹುದಾಗಿದೆ ಎಂದು ಹೇಳಿದೆ. 'ಸೌತ್ ಗ್ರೂಪ್' ಲಿಕ್ಕರ್ ಕೂಟದ ಮೂಲಕ 100 ಕೋಟಿ ರೂ. ಪಡೆಯಲಾಗಿತ್ತು. ಹಗರಣದಿಂದ ಇಂಡೋಸ್ಪಿರಿಟ್ಸ್ ಕಂಪನಿಯು 192.8 ಕೋಟಿ ರೂ.ಗಳ ಲಾಭ ಮಾಡಿತ್ತು ಎಂದು ಜಾರಿ ನಿರ್ದೇಶನಾಲಯ ಹೇಳಿದೆ. ಸಿಸೋಡಿಯ ವಿರುದ್ಧ ಸಿ.ಬಿ.ಐ. ತನಿಖೆ ಆರಂಭಿಸಿತ್ತು. ನಂತರ ಜಾರಿ ನಿರ್ದೇಶನಾಲಯ ಇದೇ ಪ್ರಕರಣದ ಆಧಾರದ ಮೇಲೆ ಅಕ್ರಮ ಹಣದ ಕುರಿತು ಕ್ರಮ ತೆಗೆದುಕೊಳ್ಳುತ್ತಿದೆ.

## ಪಂಚಮಸಾಲಿ ಸಮಾಜದಲ್ಲಿ ವಿಚಾರ ಸಂಗಮ

ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ನೌಕರರ ಜಿಲ್ಲಾ ಮತ್ತು ನಗರ ಘಟಕದ ವತಿಯಿಂದ ಇಂದು ಸಂಜೆ 6ಕ್ಕೆ ಪಂಚಮಸಾಲಿ ಸಮಾಜದ ಕಚೇರಿಯಲ್ಲಿ 'ವಿಚಾರ ಸಂಗಮ' ಕಾರ್ಯಕ್ರಮ ಏರ್ಪಡಿಸಲಾಗಿದೆ.

ಸರ್ಕಾರಿ ಪದವಿ ಕಾಲೇಜಿನ ಪ್ರಾಧ್ಯಾಪಕ ದಾದಾಪೀರ್ ನವಲೇಹಾಳ್ ವಚನಗಳಲ್ಲಿ ನಡೆ-ನುಡಿ ಸಿದ್ದಾಂತ ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಲಿದ್ದಾರೆ.

ಕಾರ್ಯಕ್ರಮವನ್ನು ಜಿಲ್ಲಾಧ್ಯಕ್ಷ ಬಿ.ಸಿ. ಉಮಾಪತಿ ಉದ್ಘಾಟಿಸುವರು, ಜಿಲ್ಲಾ ನೌಕರರ ಘಟಕದ ಅಧ್ಯಕ್ಷ ಶ್ರೀಧರ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಪಾಧ್ಯಕ್ಷ ವಾಣಿ ಶಿವಣ್ಣ, ಎಂ.ದೊಡ್ಡಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್.ಸಿ.ಕಾಶಿನಾಥ್, ನಗರ ನೌಕರರ ಘಟಕದ ಅಧ್ಯಕ್ಷ ಕೆ.ಎಸ್. ಸುರೇಶ್, ತಾಲ್ಲೂಕು ಘಟಕದ ಅಧ್ಯಕ್ಷ ಎಸ್.ಮಲ್ಲಿನಾಥ್ ಭಾಗವಹಿಸಲಿದ್ದಾರೆ.



## ಇನ್ನರ್‌ವ್ಹೀಲ್ ಸಂಸ್ಥೆ : ಮಹಿಳಾ ದಿನಾಚರಣೆ

ದಾವಣಗೆರೆ, ಮಾ. 10 - ವಿದ್ಯಾನಗರದ ಇನ್ನರ್‌ವ್ಹೀಲ್ ಸಂಸ್ಥೆ ವತಿಯಿಂದ ಮಾಗನೂರು ಬಸಪ್ಪ ರೋಟರಿ ಭವನದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು. ಆದರ್ಶ ಅತ್ತೆ-ಸೊಸೆ ಸ್ಪರ್ಧೆಯಲ್ಲಿ ಭಾಗವಹಿಸಿದವರಿಗೆ ಬಹುಮಾನ ವಿತರಿಸಿದರು. ಸಂಸ್ಥೆಯ 60 ವರ್ಷ ಮೇಲ್ಪಟ್ಟವರಿಗೆ ಸನ್ಮಾನಿಸಲಾಯಿತು.

## ಪಾಕ್‌ನಿಂದ ಡ್ರೋನ್ ಮೂಲಕ ಎ.ಕೆ. ರೈಫಲ್ ಸಾಗಣೆ

ನವದೆಹಲಿ, ಮಾ. 10 – ಎ.ಕೆ. ರೈಫಲ್ ಹಾಗೂ ಮೂರು ಡಜನ್ ಗುಂಡುಗಳೊಂದಿಗೆ ಪಾಕಿಸ್ತಾನದಿಂದ ಬಂದಿದ್ದ ಡ್ರೋನ್ ಒಂದನ್ನು ಗಡಿ ಭದ್ರತಾ ಪಡೆಯ ಸಿಬ್ಬಂದಿ ಪಂಜಾಬ್‌ನ ಅಂತರರಾಷ್ಟ್ರೀಯ ಗಡಿಯಲ್ಲಿ ಹೊಡೆದುರುಳಿಸಿದ್ದಾರೆ. ಗುರ್ದಾಸ್‌ಪುರ ಜಿಲ್ಲೆಯ ಮೆಟ್ಲ ಹಳ್ಳಿಯ ಬಳಿ ಡ್ರೋನ್ ತಡೆಯಲಾಗಿದೆ. ನಬಿ ನಗರ್ ಹಳ್ಳಿಯ ಹೊಲದಲ್ಲಿ ಡ್ರೋನ್ ಬಿದ್ದಿದ್ದು, ಅದನ್ನು ವಶಕ್ಕೆ ಪಡೆಯಲಾಗಿದೆ.

## ಸವಣೂರಿನ ರೈತ

(1ನೇ ಪುಟದಿಂದ) ಸಮೇತ ಪುರಸಭೆಗೆ ಬಂದ ಯಲ್ಲಪ್ಪ, ದುಡ್ಡು ಕೊಡುವ ತನಕ ಎತ್ತನ್ನು ನೀವೇ ಇಟ್ಟುಕೊಳ್ಳಿ ಎಂದು ಪುರಸಭೆ ಸಿಬ್ಬಂದಿಗೆ ತಿಳಿಸಿದರು. ಈ ಬೆಳವಣಿಗೆಯಿಂದ ಪುರಸಭೆ ಸಿಬ್ಬಂದಿ ಅವಾಕ್ಕಾದರು. ಸ್ವಲ್ಪ ಕಾಲ ಗೊಂದಲದ ವಾತಾವರಣ ಉಂಟಾಗಿತ್ತು.

ಈ ಬಗ್ಗೆ ಮಾತನಾಡಿರುವ ಯಲ್ಲಪ್ಪ, 2 ವರ್ಷಗಳಿಂದ ಖಾತೆಗಾಗಿ ಅಲೆದಾಡಿದ್ದೆ. ಆದರೂ ಖಾತೆ ಮಾಡಿ ಕೊಟ್ಟಿರಲಿಲ್ಲ. ಖಾತೆ ಬದಲಾವಣೆಗೆ 25 ಸಾವಿರ ರೂ. ಲಂಚ ಕೇಳಿದ್ದರು. ಅದರ ಬದಲು ಎತ್ತನ್ನೇ ತಂದಿದ್ದೇನೆ ಎಂದು ಹೇಳಿದರು. ಘಟನೆಯ ಬಗ್ಗೆ ಪ್ರತಿಕ್ರಿಯಿಸಿರುವ ಪುರಸಭೆ ಮುಖ್ಯಾಧಿಕಾರಿ ರೇಣುಕಾ ದೇಸಾಯಿ, ಘಟನೆಗೆ ಕಾರಣವಾದ ಅಧಿಕಾರಿಯ ಕುರಿತು ವರದಿ ಸಿದ್ಧಪಡಿಸಿ ಜಿಲ್ಲಾಧಿಕಾರಿಗಳಿಗೆ ಕಳಿಸಲಾಗುವುದು ಎಂದರು.

## ಜಲಾಶಯದಿಂದ ನದಿಗೆ ನೀರು

(1ನೇ ಪುಟದಿಂದ) ನೀರೆತ್ತುವುದನ್ನು ಹಾಗೂ ನದಿ ಪಾತ್ರದಲ್ಲಿ ಸಾರ್ವಜನಿಕರು ತಿರುಗಾಡುವುದಾಗಲೀ, ದನಕರುಗಳನ್ನು ನದಿಗೆ ಇಳಿಸುವುದನ್ನು ನಿಷೇಧಿಸಲಾಗಿದೆ ಎಂದು ಭದ್ರಾ ಯೋಜನಾ ನೀರಾವರಿ ಸಲಹಾ ಸಮಿತಿಯ ಅಧೀಕ್ಷಕ ಅಭಿಯಂತರು ತಿಳಿಸಿದ್ದಾರೆ.




ಕರ್ನಾಟಕ ಸರ್ಕಾರ
ಉಪ ನಿರ್ದೇಶಕರ ಕಛೇರಿ, ಜಿಲ್ಲಾ ಖಜಾನೆ
ಜಿಲ್ಲಾಡಳಿತ ಭವನ, ದಾವಣಗೆರೆ.
ದೂರವಾಣಿ ಸಂಖ್ಯೆ 08192–257922
E-mail: dd.davangere@karnataka.gov.in
ಸಂಖ್ಯೆ:– ಜಿಖದಾ/ಟೆಂಡರ್/1/2022–23 ದಿನಾಂಕ: 08.03.2023

ಟೆಂಡರ್ ಪ್ರಕಟಣೆ

ಉಪ ನಿರ್ದೇಶಕರು, ಜಿಲ್ಲಾ ಖಜಾನೆ, ದಾವಣಗೆರೆ ಕಛೇರಿಯ ಅಧಿಕೃತ ಕೆಲಸಗಳಿಗಾಗಿ ಮಾಡಲ್ 2019 ಹಾಗೂ ನಂತರದ ಸುಸ್ಥಿತಿಯಲ್ಲಿರುವ ಇನೋವಾ, ಇಟಿಯೋಸ್, ಬೊಲೇರೋ ಹಾಗೂ ವಿಶಾಲವಾದ ಡಿಕ್ಕಿ ಸ್ಪೇಸ್ ಹೊಂದಿರುವ ಇನ್ನಿತರ ನವೀನ ಮಾದರಿಯ ವಾಹನಗಳನ್ನು ಮಾಸಿಕ ದರದಲ್ಲಿ ಬಾಡಿಗೆ ಪಡೆಯಲು ರೂ. 35,000=00 + ತೆರಿಗೆಗಳ ಮಿತಿಗೆ ಒಳಪಟ್ಟು, ದರಪಟ್ಟಿಗಳನ್ನು ಸಂಬಂಧಪಟ್ಟ ಆಸಕ್ತರಿಂದ ದಿನಾಂಕ: 09.03.2023 ರಿಂದ 23.03.2023 ರವರೆಗೆ ಮಧ್ಯಾಹ್ನ 2 ಗಂಟೆಯೊಳಗಾಗಿ ಉಪ ನಿರ್ದೇಶಕರು, ಜಿಲ್ಲಾ ಖಜಾನೆ, ಜಿಲ್ಲಾಡಳಿತ ಭವನ, ದಾವಣಗೆರೆ ಕಛೇರಿಗೆ ದರಪಟ್ಟಿಯನ್ನು ಸಲ್ಲಿಸಲು ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಾಗೂ ಷರತ್ತುಗಳಿಗೆ ಜಿಲ್ಲಾ ಖಜಾನೆ, ಜಿಲ್ಲಾ ಆಡಳಿತ ಭವನ, ದಾವಣಗೆರೆ ಕಛೇರಿಯನ್ನು ಸಂಪರ್ಕಿಸಲು ತಿಳಿಸಿದೆ.

ವಾಸಾಇ/ಡಿವಿಜಿ/1028/ ಕೆಎಸ್‌ಎಂಸಿಎ/2022–23
ಸಹಿ/– ಉಪ ನಿರ್ದೇಶಕರು, ಜಿಲ್ಲಾ ಖಜಾನೆ, ದಾವಣಗೆರೆ.

ಬೇಕಾಗಿದ್ದಾರೆ
ಆಪ್ಟಿಕಲ್ ಪ್ಯಾರಾಡೈಸ್
ಕನ್ನಡಕದ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ವಿದ್ಯಾಭ್ಯಾಸ : SSLC ( Pass / Fail )
PUC ( Pass / Fail )
ಆಪ್ಟಿಕಲ್ ಪ್ಯಾರಾಡೈಸ್,
ಎವಿಕೆ ಕಾಲೇಜ್ ರಸ್ತೆ, ದಾವಣಗೆರೆ-577 002.
ಫೋ. : 79754 47909

# ಹಳೇ ಕುಂದುವಾಡದಲ್ಲಿ ಬೆಳ್ಳಿ ಕಪ್ ಟೂರ್ನಿ



ದಾವಣಗೆರೆ, ಮಾ.10- ನಗರದ ಹಳೇ ಕುಂದುವಾಡದಲ್ಲಿ ಮನಾ ಯುವ ಬ್ರಿಗೇಡ್, ಜನತಾ ರಕ್ಷಣಾ ವೇದಿಕೆಯಿಂದ ಹಮ್ಮಿಕೊಂಡಿದ್ದ ಸಿಲ್ವರ್ ಕೆಪಿಎಲ್ -5 ಟೂರ್ನಿಗೆ ಚಾಲನೆ ನೀಡಲಾಗಿದೆ. ಟೂರ್ನಿಗೆ ಚಾಲನೆ ನೀಡಿ ಮಾತನಾಡಿದ ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲೋಕಿಕೆರೆ ನಾಗರಾಜ್, ಟೂರ್ನಿಮೆಂಟ್ ನಡೆಸುವುದು ತುಂಬಾ ಕಷ್ಟದ ಕೆಲಸ, ಮನಾ ಯುವ ಬ್ರಿಗೇಡ್ ಹಾಗೂ ಜರವೇ ಸದಸ್ಯರು ಪ್ರತಿ ವರ್ಷ ಕುಂದುವಾಡ ಪ್ರಿಮೀಯರ್ ಲೀಗ್ ಆಯೋಜಿಸುತ್ತಿರುವುದು ಹೆಮ್ಮೆಯ ಸಂಗತಿ. ಅಷ್ಟೆ ಅಲ್ಲದೇ ಸಮಾಜ ಸೇವೆ ನಡೆಸಿಕೊಂಡು ಬರುತ್ತಿರುವ ಕಾರ್ಯ ಶ್ಲಾಘನೀಯ ಯುವಕರು ಕ್ರೀಡಾ ಸ್ಫೂರ್ತಿ ಮೆರೆಯಬೇಕು ಎಂದು ಸಲಹೆ ನೀಡಿದರು.

ಮಾಜಿ ಮೇಯರ್ ಹೆಚ್.ಎನ್. ಗುರುನಾಥ್, ಎಪಿಎಂಸಿ ಮಾಜಿ ಅಧ್ಯಕ್ಷ ಹೆಚ್.ಜಿ. ಗಣೇಶಪ್ಪ, ಮುಖಂಡರಾದ ಗೌಡ್ರು ಬಸವರಾಜಪ್ಪ, ರಾಜಣ್ಣ, ಶಿವಪ್ಪ, ಸಣ್ಣಿಂಗಪ್ಪ, ರಾಜೇಶ್ ವಿ. ಶೇಟ್, ಮಂಜಪ್ಪ ಲೋಕಿಕೆರೆ, ಮಾರುತಿ ರಾಯ್ಕರ್, ಸಚಿನ್ ಅಣ್ವೇಕರ್, ಪರಮೇಶ್, ನಿಂಗಪ್ಪ, ವೇದಿಕೆ ಅಧ್ಯಕ್ಷ ಮಧು ನಾಗರಾಜ್, ರಾಜು ಕರೂರು, ನಾಗರಾಜ್, ಶಿವು ಸೇರಿದಂತೆ ಮತ್ತಿತರರಿದ್ದರು.

# ಶೀಲ ಶಂಕಿಸಿ ಸೊಸೆ ಹತ್ಯೆ: ಆರೋಪಿಗೆ ಜೀವಾವಧಿ ಶಿಕ್ಷೆ

ದಾವಣಗೆರೆ, ಮಾ. 10- ಶೀಲ ಶಂಕಿಸಿ ಸೊಸೆಯನ್ನು ಹತ್ಯೆ ಮಾಡಿದ ಆರೋಪಿಗೆ ಇಲ್ಲಿನ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ 20 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ಹೊನ್ನಾಳಿ ತಾಲ್ಲೂಕು ಚೀಲಾಪುರ ಗ್ರಾಮದ ಶಫಿವುಲ್ಲಾ, ತನ್ನ ಸೊಸೆ ರಮೀಜಾಬೀ ಅವರ ಶೀಲದ ಮೇಲೆ ಅನುಮಾನಪಟ್ಟು, ಸೊಸೆ ಬಹಿರ್ದೆಸೆಗೆ ಹೋದಾಗ ಹಿಂಬಾಲಿಸಿಕೊಂಡು ಹೋಗಿ ಚಾಕುವಿನಿಂದ ಚುಚ್ಚಿ ಕೊಲೆ ಮಾಡಿರುವುದಾಗಿ ರಮೀಜಾಬಿ ಅತಾವುಲ್ಲಾ ತನ್ನ ತಂದೆ ಶಫಿವುಲ್ಲಾ ಅವರ ಮೇಲೆಯೇ ದೂರು ನೀಡಿದ್ದರು.

ಹೊನ್ನಾಳಿ ವೃತ್ತ ನಿರೀಕ್ಷಕ ಟಿ.ವಿ. ದೇವರಾಜ್ ಪ್ರಕರಣದ ತನಿಖೆ ನಡೆಸಿ ಆರೋಪಿತನ ವಿರುದ್ಧ ದೋಷಾರೋಪಣೆ ಪಟ್ಟಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ದಾವಣಗೆರೆಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಲ್ಲಿ ವಿಚಾರಣೆ ನಡೆದು, ನ್ಯಾಯಾಧೀಶರಾದ ಜೆ.ವಿ ವಿಜಯಾನಂದ ತೀರ್ಪು ನೀಡಿದ್ದಾರೆ. ಸರ್ಕಾರಿ ಅಭಿಯೋಜಕ ಸತೀಶ್ ವಾದ ಮಂಡಿಸಿದ್ದರು.

# ರಾಜೀನಾಮೆ ನೀಡದ ಸಿಎಂ

**(1ನೇ ಪುಟದಿಂದ)** ಮುಖ್ಯಮಂತ್ರಿಯಾಗಿದ್ದೀಯಾ, ನಿನ್ನ ಆಡಳಿತಾವಧಿಯಲ್ಲಿಯೇ ಹೆಚ್ಚು ಭ್ರಷ್ಟಾಚಾರವಾಗಿದೆ ಎಂದ ಸಿದ್ದರಾಮಯ್ಯ, ಗುತ್ತಿಗೆದಾರ ಕೆಂಪಣ್ಣ ಶೇ 40 ಕಮೀಷನ್ ಕೇಳುತ್ತಾರೆ ಎಂದು ನರೇಂದ್ರ ಮೋದಿಯವರಿಗೆ ಪತ್ರ ಬರೆದಿದ್ದರು. ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು ಶಾಲಾ ಕಾಲೇಜುಗಳ ಆರಂಭಕ್ಕೆ ದುಡ್ಡು ಕೇಳುತ್ತಾರೆ ಎಂದು ಪತ್ರ ಬರೆದರು.

ಬೆಳಗಾವಿ ಜಿಲ್ಲೆಯ ಬಿಜೆಪಿ ಗುತ್ತಿಗೆದಾರ ಸಂತೋಷ್ ಪಾಟೀಲ್ ಶಾಸಕ ಕೆ.ಎಸ್. ಈಶ್ವರಪ್ಪ ಕಮೀಷನ್ ಕೊಡಿ ಎಂದು ಕೇಳುತ್ತಾರೆ ಎಂದು ಆರೋಪ ಮಾಡಿ ಆತ್ಮಹತ್ಯೆ ಮಾಡಿಕೊಂಡರು. ಇಂತಹ ನೂರಾರು ಸಾಕ್ಷಿಗಳು ಕಣ್ಣಿಂದೆ ಇದ್ದರೂ ಬೊಮ್ಮಾಯಿ ಮಾತ್ರ ಏನೂ ಆಗಿಲ್ಲ ಎಂದುಕೊಂಡು ಭಂಡತನದಿಂದ ಅಧಿಕಾರದಲ್ಲಿ ಮುಂದುವರಿದಿದ್ದಾರೆ ಎಂದು ಆರೋಪಿಸಿದರು.

ಮಾಜಿ ಶಾಸಕ ವಡ್ನಾಳ್ ರಾಜಣ್ಣ ಅಧ್ಯಕ್ಷತೆ ವಹಿಸಿದ್ದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, ಪ್ರಧಾನ ಕಾರ್ಯದರ್ಶಿ ಪ್ರಕಾಶ್ ರಾಠೋಡ್, ಮಾಧ್ಯಮ ವಕ್ತಾರ ಡಿ. ಬಸವರಾಜ್, ಜಿಲ್ಲಾಧ್ಯಕ್ಷ ಎಚ್.ಬಿ. ಮಂಜಪ್ಪ, ಟಿಕೆಟ್ ಆಕಾಂಕ್ಷಿಗಳಾದ ತೇಜಸ್ವಿ ಪಟೇಲ್, ಲಿಂಗರಾಜು, ಪುನೀತ್ ಕುಮಾರ್, ಹೊದಿಗೆರೆ ರಮೇಶ್, ನಿರಂಜನ್, ವಡ್ನಾಳ್ ಜಗದೀಶ್, ವಡ್ನಾಳ್ ಅಶೋಕ್, ಬಸವರಾಜ್ ಶಿವಗಂಗಾ, ತಾಲ್ಲೂಕು ಸಮಿತಿ ಅಧ್ಯಕ್ಷ ಸಿ.ಎಚ್. ಶ್ರೀನಿವಾಸ್, ಸಿ. ನಾಗರಾಜ್ ಇದ್ದರು.

## ಮಗ ಲಂಚ ಪಡೆಯುತ್ತಾನೆಯೇ ?

ಭ್ರಷ್ಟ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಪುತ್ರ ಪ್ರಶಾಂತ್ 40 ಲಕ್ಷ ರೂ. ಲಂಚವನ್ನು ಸ್ವೀಕರಿಸುವಾಗ ಸಿಕ್ಕಿ ಬಿದ್ದ. ಅಪ್ಪ ಹೇಳದೆಯೇ ಮಗ ಲಂಚ ಪಡೆಯುತ್ತಾನೆಯೇ? ಎಂದು ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಪ್ರಶ್ನಿಸಿದರು.

ಈ ಹಣವನ್ನು ಯಾರೋ ಬಂದು ಕಚೇರಿಯಲ್ಲಿ ಇಟ್ಟು ಹೋದರು ಎಂದು ವಿರೂಪಾಕ್ಷಪ್ಪ ಬೊಬ್ಬೆ ಹೊಡೆಯುತ್ತಿದ್ದಾರೆ. ಮಾಡಾಳ್ ಮನೆಯಲ್ಲಿ 6.12 ಕೋಟಿ ರೂ. ಹಣ ಸಿಕ್ಕಿದೆ. ಇದೆಲ್ಲಾ ಎಲ್ಲಿಂದ ಬಂತು. ಒಬ್ಬ ಶಾಸಕ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಹಣ ಮಾಡಿದ್ದಾನೆ ಎಂದರೆ ಇನ್ನು ಸಚಿವರ ಮನೆಯಲ್ಲಿ ಇಷ್ಟು ದುಡ್ಡ ಇರಬೇಕು ಎಂಬುದನ್ನು ನೀವೇ ಊಹಿಸಿಕೊಳ್ಳಬೇಕು ಎಂದು ಹೇಳಿದರು.

ಭ್ರಷ್ಟಾಚಾರ ಮಾಡಿ ಸಿಕ್ಕಿಬಿದ್ದರೂ ಮೆರವಣಿಗೆ ಮಾಡಿಕೊಂಡು ಬರುತ್ತಾರೆ ಎಂದರೆ ಇವರಿಗೆ ನಾಚಿಕೆ ಇಲ್ಲವೇ? ವಿರೂಪಾಕ್ಷಪ್ಪನಿಗೆ ಕೋರ್ಟ್ ಮಾತ್ರ ಜಾಮೀನು ನೀಡಿದೆ. ಆದರೆ ಇಂತಹ ಭ್ರಷ್ಟ ವ್ಯಕ್ತಿಗೆ ಈ ಕ್ಷೇತ್ರದ ಜನರು ತಕ್ಕ ಉತ್ತರ ನೀಡಬೇಕಾಗಿದೆ ಎಂದರು.

# ಕೆಎಸ್‌ಎಸ್ ಕಾಲೇಜ್ ಮುಂಭಾಗದ ಸಿಸಿ ರಸ್ತೆ ಕಾಮಗಾರಿಗೆ ಚಾಲನೆ



ದಾವಣಗೆರೆ, ಮಾ.10- ಕೆಎಸ್‌ಎಸ್ ಕಾಲೇಜಿನ ಮುಂಭಾಗದ ಸಿಸಿ ರಸ್ತೆ ಕಾಮಗಾರಿಗೆ ಇಂದು ಚಾಲನೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆಯ ಮಹಾಪೌರರಾದ ವಿನಾಯಕ ಪೈಲ್ವಾನ್, ಪಾಲಿಕೆ ಸದಸ್ಯ ಕೆ.ಎಂ. ವೀರೇಶ್, ದೂಡಾ ಮಾಜಿ ಅಧ್ಯಕ್ಷ ಕೆ.ಎಂ. ಸುರೇಶ್ ಹಾಗೂ ನಾಮಿನಿ ಸದಸ್ಯ ದುರ್ಗೇಶ್ ಮತ್ತಿತರೆ ಪ್ರಮುಖರು ಭಾಗವಹಿಸಿದ್ದರು.

# ಸೇಂಟ್ ಜಾನ್ಸ್ : ಮಹಿಳಾ ದಿನಾಚರಣೆ



ದಾವಣಗೆರೆ, ಮಾ. 10- ನಗರದ ಸೇಂಟ್ ಜಾನ್ಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಶಿಕ್ಷಕಿ ಶ್ರೀಮತಿ ಜಿ.ಕೆ. ಮಂಗಳ ಭಾವಗೀತೆ ಹಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾರ್ಯದರ್ಶಿ ಟಿ.ಎಂ. ಉಮಾಪತಯ್ಯ ಮಹಿಳೆಯರ ಧೈರ್ಯ, ಸ್ಥೈರ್ಯ, ತಾಳ್ಮೆ ಸಂಯಮದ ಗುಣಗಳನ್ನು ಹೊಗಳಿದರು.

ಶಿಕ್ಷಕ ಎನ್. ಮೌನೇಶ್ ಮಾತನಾಡಿ, ಮಹಿಳಾ ದಿನಾಚರಣೆಯ ಹಿನ್ನೆಲೆ, ಪ್ರಾಮುಖ್ಯತೆ, ಸಂವಿಧಾನದಿಂದ ಸ್ತ್ರೀಯರಿಗೆ ದೊರೆತಿರುವ ಸವಲತ್ತುಗಳ ಬಗ್ಗೆ ತಿಳಿಸಿದರು.

ಸೇಂಟ್ ಜಾನ್ಸ್ ವಿದ್ಯಾಸಂಸ್ಥೆಯ ಖಜಾಂಚಿ ಪ್ರವೀಣ್ ಹುಲ್ಲುಮನೆ ಮಹಿಳಾ ದಿನಾಚರಣೆ ಪ್ರಯುಕ್ತ ಶಾಲೆಯ ಮಹಿಳಾ ಸಿಬ್ಬಂದಿಗಳಿಗೆ ಮನರಂಜನಾ ಚಟುವಟಿಕೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿದರು. ಪ್ರಾಂಶುಪಾಲ ಸೈಯದ್ ಆರಿಫ್ ಆರ್.ಸ್ವಾಗತಿಸಿದರು. ಸಹ ಶಿಕ್ಷಕ ಎಸ್.ಜಿ. ಸಿದ್ದೇಶ್ ಕಾರ್ಯಕ್ರಮ ನಿರೂಪಿಸಿದರು.

# ಸಿವಿಲ್ ವಿಭಾಗದ ವೇದಿಕೆ ಉದ್ಘಾಟನೆ



ದಾವಣಗೆರೆ, ಮಾ.10- ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಪ್ರಸಕ್ತ ಶೈಕ್ಷಣಿಕ ವರ್ಷದ ವೇದಿಕೆ ಉದ್ಘಾಟನೆ ಕಾರ್ಯಕ್ರಮವನ್ನು ಕಾಲೇಜಿನ ಆಡಿಟೋರಿಯಂನಲ್ಲಿ ನಡೆಯಿತು.

ಪ್ರಾಂಶುಪಾಲ ಡಾ. ಡಿ.ಬಿ. ಗಣೇಶ್, ಸಿವಿಲ್ ವಿಭಾಗದ ಮುಖ್ಯಸ್ಥ ಡಾ. ರಾಹುಲ್ ಪಟೇಲ್, ಮುಖ್ಯ ಅತಿಥಿಗಳಾದ ಸಿಟಿ ಕಾರ್ಪೊರೇಷನ್ ಕಾರ್ಯಪಾಲಕ ಇಂಜಿನಿಯರ್ ಎಂ.ಎನ್. ಹರ್ಷಿತ, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ (ಹರಿಹರ) ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಟಿ.ಎಂ. ನಾಗರಾಜ್ ಕಾರ್ಯಕ್ರಮ ಉದ್ಘಾಟಿಸಿದರು.

ವಿಶೇಷ ಅತಿಥಿಗಳಾಗಿ ವಿಭಾಗದ ಹಳೆಯ ವಿದ್ಯಾರ್ಥಿ ಆಸ್ಟ್ರೇಲಿಯಾದ ಸಿವಿಲ್ ಡಿಸೈನ್ ಇಂಜಿನಿಯರ್ ಚರಣ್‌ರಾಜ್ ಹಾಗೂ ಪಿಡಬ್ಲ್ಯೂಡಿ ಸಹಾಯಕ ಇಂಜಿನಿಯರ್ ಎಂ. ತನುಜಾ ಅವರನ್ನು ಸನ್ಮಾನಿಸಲಾಯಿತು.

ಕಾಲೇಜಿನ ಪ್ರಾಧ್ಯಾಪಕ ಪದಾಧಿಕಾರಿಗಳಾದ ಎಂ.ಎಸ್. ಕಿರಣ್ ಕುಮಾರ್ ಮತ್ತು ಕೆ.ಎಸ್. ಹರೀಶ್ ಹಾಗೂ ಇತರರು ಉಪಸ್ಥಿತರಿದ್ದರು.

# 5, 8ನೇ ಪಬ್ಲಿಕ್ ಪರೀಕ್ಷೆ ರದ್ದು



**(1ನೇ ಪುಟದಿಂದ)** ಪಠ್ಯಕ್ರಮವನ್ನು ಸರ್ಕಾರಿ ಶಾಲೆಗಳಿಗೆ ಮಾತ್ರ ನೀಡಲಾಗಿದೆ ಎಂಬುದೂ ಖಾಸಗಿ ಶಾಲೆಗಳ ಆಕ್ಷೇಪಕ್ಕೆ ಕಾರಣವಾಗಿತ್ತು.

ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಿಗೆ ಮಾತ್ರ ಕಲಿಕಾ ಚೇತರಿಕೆ ಪಠ್ಯಕ್ರಮ ನೀಡಲಾಗಿದೆ. ಖಾಸಗಿ ಶಾಲೆ ಗಳಿಗೆ ಈ ಪಠ್ಯಕ್ರಮ ನೀಡಿಲ್ಲ ಎಂದೂ ಆಕ್ಷೇಪಿಸಲಾಗಿತ್ತು. ಬೋರ್ಡ್ ಪರೀಕ್ಷೆ ಮಾಡುತ್ತಿಲ್ಲ, ಮಕ್ಕಳ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಮಾತ್ರ ಅಲ್ಪಸ್ವಲ್ಪ ಬದಲಾವಣೆ ಮಾಡಲಾಗಿದೆ. ಪತ್ರಿಕೆಯ ಮೌಲ್ಯಮಾಪನ ವನ್ನು ತಾಲ್ಲೂಕು ಮಟ್ಟದಲ್ಲಿ ಮಾಡಲಾಗುವುದು ಎಂದು ಸರ್ಕಾರ ನ್ಯಾಯಾಲಯಕ್ಕೆ ಸ್ಪಷ್ಟನೆ ನೀಡಿತ್ತು.

ಆದರೆ, ಸರ್ಕಾರದ ಸ್ಪಷ್ಟನೆಯನ್ನು ಒಪ್ಪದ ಹೈಕೋರ್ಟ್, ಈ ವರ್ಷ ಪಬ್ಲಿಕ್ ಪರೀಕ್ಷೆ ನಡೆಸದಂತೆ ಆದೇಶ ಹೊರಡಿಸಿದೆ.


**ವಾಣಿಜ್ಯ ಕಟ್ಟಡ ಬಾಡಿಗೆಗೆ**
ಹದಡಿ ಮುಖ್ಯ ರಸ್ತೆಯಲ್ಲಿರುವ ಟಿವಿಎಸ್ ಷೋರೂಂ ಪಕ್ಕ ಹಾಗೂ ಉದಯ ಬಜಾರ್ ಎದುರಗಡೆ ಇರುವ ಸುಸಜ್ಜಿತ ವಾಣಿಜ್ಯ ಕಟ್ಟಡ ಬಾಡಿಗೆಗಿದೆ. ನೆಲ ಮಹಡಿ 3800 ಅಡಿಗಳು, ಮೊದಲನೇ ಮಹಡಿ 1600 ಅಡಿಗಳು. ಸೆಲ್ಲರ್ 2400 ಅಡಿಗಳು ಸಂಪರ್ಕಿಸಿ.
96205 95579

**ಸೈಟು ಬೇಕಾಗಿರುತ್ತದೆ**
ತರಳಬಾಳು ಬಡಾವಣೆ, ವಿದ್ಯಾನಗರ, ವಿನಾಯಕ ಬಡಾವಣೆ, ಉತ್ತರ ಅಥವಾ ಪೂರ್ವ ದಿಕ್ಕಿನ 30x50, 40x60 ಅಳತೆಯ ಸೈಟು ಬೇಕಾಗಿರುತ್ತದೆ. ಸಂಪರ್ಕಿಸಿ.
94482 32901, 94492 66296

**ಕಮರ್ಷಿಯಲ್ ಸೈಟ್ ಮಾರಾಟಕ್ಕೆ**
KHB ತುಂಗ ಭದ್ರ ಬಡಾವಣೆಯಲ್ಲಿ 30x51.5 (1545 ಅಡಿ ) ಸೌತ್ ಮತ್ತು ನಾರ್ತ್ ರೋಡ್ ಇದೆ. 60 ಅಡಿ ಬನ್ನಿಕೋಡ್ ರೋಡ್ ಗೆ ಬಸವೇಶ್ವರ ಸ್ಕೂಲ್ ಎದರು.
ಕಿರಣ್ ಬೂಸ್ನೂರ್
98440-63409

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**EC / ಇಸಿ E-swathu Khatha Change Building Licence**
Call :
96118-66449

**2BHK ಗ್ರೌಂಡ್ ಫ್ಲೋರ್ ಬಾಡಿಗೆ/ಲೀಜ್**
ಶಿವಕುಮಾರ ಸ್ವಾಮಿ ಬಡಾವಣೆ ಸೆಂಟ್ ಜಾನ್ಸ್ ಹಾಗೂ ದುರ್ಗಾಂಬಿಕಾ ಶಾಲೆ ಹತ್ತಿರ. ಕಾರ್ಪೊರೇಷನ್ ವಾಟರ್ ಹಾಗೂ ಬೋರ್ ಸೌಲಭ್ಯವುಳ್ಳ ಮನೆ ಬಾಡಿಗೆಗೆ / ಲೀಜ್‌ಗೆ ವಿಚಾರಿಸಿ.
99868 79762, 90353 52868

**ಶೋರೂಂಗೆ ಬೇಕಾಗಿದ್ದಾರೆ**
Shanti Electric Vehicles
Double Decor Furniture
Female - ಮಹಿಳೆಯರು
Computer Office - 02 No.s.
Showroom Sales - 01 No.s
Male - ಪುರುಷರು
Showroom Sales - 02, Mechanics - 02
BSNL Circle, Davangere.
92432 19553

**ಬೇಕಾಗಿದ್ದಾರೆ**
ಎಲೆಬೇತೂರು ಗ್ರಾಮದಲ್ಲಿ ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. (ಮನೆಗೇ ಬಂದು ಭೇಟಿ ಮಾಡಬೇಕು) ಸಮಯ : ಮಧ್ಯಾಹ್ನ 12 ರಿಂದ 2 ರವರೆಗೆ. ಸಂಪರ್ಕಿಸಿ.
74067 40635

**ಕೆಲಸಕ್ಕೆ ಬೇಕಾಗಿದ್ದಾರೆ**
ಡೆಂಟಲ್ ಆರ್ಟ್ ಲ್ಯಾಬ್, ಇಂಡಸ್ಟ್ರಿಯಲ್ ಏರಿಯಾ, ಬಕ್ಕೇಶ್ವರ ರೈಸ್ ಮಿಲ್ ಹತ್ತಿರ, ಲೋಕಿಕೆರೆ ರಸ್ತೆ, ದಾವಣಗೆರೆ.
ಫೋ. : 99000 05433

**ಮನೆಗಳು ಮಾರಾಟಕ್ಕಿವೆ**
ನೂತನ ಕಾಲೇಜ್ ಹಿಂಭಾಗ ಶಿವಗಂಗೆ ಕಲ್ಯಾಣ ಮಂಟಪ ಹತ್ತಿರ 30x40 East, 30x45 West, 30x40 East, 30x40 North, ಬಾಡಿಗೆ ಬರುವಂತೆ ಮನೆ
ಐನಳ್ಳಿ ಚನ್ನಬಸಪ್ಪ
99166 12110

**WANTED**
Applications are invited for the Post of Audit Assistants
No. of Vacancies -2, Min. Qualification : Any Graduation with Computer Knowledge.
From : SHANKAR & CO.,
Tax Practitioner,
Opp. to Arogya matha Hospital, Amaravathi Housing Colony, P.B. Road, Harihar.
81975 70094

**ಹುಡುಗರು ಬೇಕಾಗಿದ್ದಾರೆ**
ಪೈಪ್ ಹಾಗೂ ಸ್ಯಾನಿಟೈಸರ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ.
97388 27452, 74110 25934

**ಮನೆ ಬಾಡಿಗೆಗೆ ಇದೆ**
ಡಿಸಿಎಂ ಟೌನ್‌ಶಿಪ್, ಸಿ ಬ್ಲಾಕ್, 6ನೇ ಮೇನ್, 4ನೇ ಕ್ರಾಸ್, 2ನೇ ಫ್ಲೋರ್, 1 BHK ಮನೆ ಬಾಡಿಗೆಗೆ ಇದೆ ಸಂಪರ್ಕಿಸಿ :
ದೇವೇಂದ್ರನಾಯ್ಕ
ಫೋ. : 97401 11769

**ಮಾರಾಟಕ್ಕಿದೆ**
5-6 ವರ್ಷದ ಉತ್ತಮ ತಳಿ ಅಡಿಕೆ ತೋಟ, 3.18 ಎಕರೆ, ದಾವಣಗೆರೆಯಿಂದ 10 ಕಿ.ಮೀ.
ಫೋ. : 77950 10929

**ಬಾಡಿಗೆಗೆ ಇದೆ**
ದಾವಣಗೆರೆ, ಕೆ.ಬಿ. ಬಡಾವಣೆ. ತ್ರಿಶೂಲ್ ರಸ್ತೆಯಲ್ಲಿರುವ ಶ್ರೀ ಸಿದ್ದೇಶ್ವರ ಕಾಂಪ್ಲೆಕ್ಸ್‌ನ 1ನೇ ಮಹಡಿಯಲ್ಲಿರುವ 850 ಚ.ಅಡಿ. ವಿಸ್ತೀರ್ಣವಿರುವ ಮಳಿಗೆಯು ಬಾಡಿಗೆಗೆ ದೊರೆಯುತ್ತದೆ. ವಿಚಾರಿಸಿ :
ಫೋ. : 99165 25586

**ಸೈಟ್ ಮಾರಾಟಕ್ಕಿದೆ**
ಪೋದಾರ್ ಸ್ಕೂಲ್, ಶಾಮನೂರು ಹತ್ತಿರ, 20x30 ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
95918 29780, 80731 78139

**WANTED**
A Degree candidates are required to work in auditors office.
Please Contact :
B.G. Basavarajappa
jayadeva Circle.
99001 42052

**TO-LET**
3 BHK Ground Floor Suitable for Godown & Commercial (South)
2 BHK First Floor (East)
# 303/4, `Rohini Complex'
P.J. Extension, 2 Main Road, Stadium Road, Davangere.
96111 74878, 89707 89513

**ಮನೆ ಮಾರಾಟಕ್ಕೆ ಇದೆ**
KTJ ನಗರ 15ನೇ ಕ್ರಾಸ್ 2ನೇ ಮೇನ್‌ನಲ್ಲಿ 30x40 ಅಳತೆಯಲ್ಲಿ ಕಟ್ಟಿರುವ ಹಳೆಯ ಮನೆ ಮಾರಾಟಕ್ಕೆ ಇದೆ.
96388 17967, 73380 43912

**ಸೈಟ್ ಮಾರಾಟಕ್ಕೆ**
HITECH HOSPITAL ಹಿಂಭಾಗ 30X38 ಉತ್ತರ ಪಶ್ಚಿಮ ಕಾರ್ನರ್ 30X40 ಉತ್ತರ.
ಕಿರಣ್ ಬೂಸ್ನೂರ್ (AGENT)
98440-63409

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ (Euro-kids school ಹಿಂಭಾಗ) ಪೂರ್ವ 40x60 (40 ಅಡಿ ರಸ್ತೆ ), 30x56, 30x44, 40x67, ಪಶ್ಚಿಮ 30x50, 30x40, ಬನಶಂಕರಿ ಬಡಾವಣೆ ಪೂರ್ವ 40x60, ಪಶ್ಚಿಮ 30x65 (ಅಕ್ಕ-ಪಕ್ಕ)
ಐಗೂರು ವಿಜಯಕುಮಾರ :
99457 02495

**ಸೈಟುಗಳು ಮಾರಾಟಕ್ಕಿವೆ**
ಬಸವೇಶ್ವರ ಲೇಔಟ್ ಪೂರ್ವ 40x60, ಉತ್ತರ 30x50, ದಕ್ಷಿಣ 30x50, (ಅಕ್ಕ-ಪಕ್ಕ) ಕುಂದವಾಡ (ಮೋತಿ ಲೇಔಟ್ ಪಕ್ಕ 40 ಅಡಿ ರಸ್ತೆಗೆ) ಉತ್ತರ 30x50 (ಅಕ್ಕ-ಪಕ್ಕ) 45x30.
ಐಗೂರು ವಿಜಯ ಕುಮಾರ :
99457 02495

**ಸೈಟುಗಳು ಮಾರಾಟಕ್ಕಿವೆ**
ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ LIC ಕಾಲೋನಿಯಲ್ಲಿ ಆಂಜನೇಯ ಬಡಾವಣೆಯಲ್ಲಿ 30x40 South, 30x40 West, 30x50 East, 40x80 East, 30x50 South.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಅಕೌಂಟೆಂಟ್ ಬೇಕಾಗಿದ್ದಾರೆ**
ಪಾರ್ಟ್ ಟೈಂ / ಫುಲ್ ಟೈಂ ಟ್ಯಾಲಿ ಬಲ್ಲವರಿಗೆ ಆದ್ಯತೆ.
ವಿನಾಯಕ ಇಂಡಸ್ಟ್ರೀಸ್
ಇಂಡಸ್ಟ್ರೀಸ್ ಏರಿಯಾ, ದಾವಣಗೆರೆ.
ಫೋ : 94481 50174

**ಸೈಟು ಮಾರಾಟಕ್ಕಿದೆ**
ಕುಂದುವಾಡ ಕೆರೆ ಹತ್ತಿರ ಬಾಲಾಜಿ ನಗರ, ಲಾಳಿ ಹನುಮಂತಪ್ಪ ಶಾಲೆ ಬಳಿ 58+59/2x79+90/2 (4943 sqft) ಉತ್ತರ ಮುಖವಿರುವ ಬಂಗ್ಲೋ ಸೈಟ್ ಮಾರಾಟಕ್ಕಿದೆ. ರೇಟ್ : 3600 Rs / sqft.
93416 48668

**ಮಳಿಗೆ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. ಬಿ ಬ್ಲಾಕ್, 5ನೇ ಮೇನ್, ಕಾರ್ನರ್, 3ನೇ ಕ್ರಾಸ್ ಸೈಟ್ ಅಳತೆ 10x30
ಫೋ. : 82177 72482

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದವಾಡ ಹತ್ತಿರ ಸರ್ಕಾರಿ ನೌಕರರ ಬಡಾವಣೆಯ ಸುತ್ತಮುತ್ತ ಹೊಸ ಬಡಾವಣೆಗಳಲ್ಲಿ 30x50 ಪೂರ್ವ, 30x50 ಉತ್ತರ, 30x40 ಪಶ್ಚಿಮ, 30x40 ಪೂರ್ವ-ದಕ್ಷಿಣ ಕಾರ್ನರ್, 30x40 ಪಶ್ಚಿಮ ದಕ್ಷಿಣ ಕಾರ್ನರ್.
ಸ್ವಾಮಿ ಏಜೆಂಟ್, ವಿದ್ಯಾನಗರ.
97421 44715

**ಮನೆ ಬಾಡಿಗೆಗೆ/ಲೀಸ್‌ಗೆ**
ಕುಂದುವಾಡ ಕೆರೆ ಹತ್ತಿರ ಮಹಾಲಕ್ಷ್ಮಿ ಲೇಔಟ್‌ನಲ್ಲಿ ಹಾಗೂ S.S.Hi tech ಹಾಸ್ಪಿಟಲ್ ಹತ್ತಿರ ಲಕ್ಷ್ಮಿ ಲೇಔಟ್‌ನಲ್ಲಿ ಎರಡು ಬೆಡ್ ರೂಂ ಹಾಗೂ ಅಟ್ಯಾಚ್ ಬಾತ್ ರೂಂವುಳ್ಳ ಮನೆಗಳು ಇವೆ.
96388 17967, 73380 43912

**Required**
TELECALLERS (10-Members)
Attractive Salary &
Receptionists only For Ladies
SCIENCE PU COLLEGE
Location:- Davangere, Anjanaya Badavane BIET Road. Contact.
99019 62676 / 91108 26144

**ಮಾರಾಟಕ್ಕೆ**
* ನಿಟ್ಟುವಳ್ಳಿ ಆದರ್ಶ ಸ್ಕೂಲ್ ಹತ್ತಿರ ಸೈಟ್ (ಉತ್ತರ ) 39x61,
* ಶಕ್ತಿ ನಗರ ( ರಾಜೇಂದ್ರ ಬಡಾವಣೆ) ದಕ್ಷಿಣ ದಿಕ್ಕಿನ ಪೂರ್ವ ಬಾಗಿಲು, 3 ಫ್ಲೋರ್ ಇರುವ ಮನೆ 20x30.
* ದುರ್ಗಾಂಬಿಕಾ ಬಡಾವಣೆ ನಿಟ್ಟುವಳ್ಳಿ ಸೈಟ್ (ಪೂರ್ವ) 20x30
* ಬನಶ್ರೀ ಲೇಔಟ್ ( ಶಾಮನೂರು) ಸೈಟ್ (ಉತ್ತರ) 30x50
7899636597, 9916525828

**ಕಟ್ಟಡ ನಿರ್ಮಾಣ**
ಹೊಸ ಮನೆ ನಿರ್ಮಾಣ, ಹಳೆಯ ಮನೆ ರಿಪೇರಿ, ಮೆಟೀರಿಯಲ್, ಕಂಟ್ರಾಕ್ಟರ್ ಲೇಬರ್ ಕಂಟ್ರಾಕ್ಟರ್
ಮರುತ್ ಕನ್‌ಸ್ಟ್ರಕ್ಷನ್
YMC ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.
ಫೋ. : 98455 83340

**ಯುಗಾದಿ ಆಫರ್ ಹೋಲ್‌ಸೇಲ್ ದರದಲ್ಲಿ**
RO + UV ವಾಟರ್ ಫಿಲ್ಟರ್, 5499/- ರೂ. ಮಾತ್ರ, Fully automatic ಗ್ಯಾಸ್ ಗೀಸರ್ 2999/- ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ:
ಮರುತ್ ಎಂಟರ್‌ಪ್ರೈಸಸ್
YMC ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**WANTED**
1) B.Sc, B.Ed - Head Miss
2) BA, B.Ed- Asst. Teacher
3) D.Ed / Degree/ NTC / PUC- Asst. Teacher
4) Computer/ Tailoring - Asst. Teacher
5) School Bus Drvier 6) School Attender.
Apply with / WhatsApp resume
S.N PUBLIC SCHOOL
Harihara (Br), Davanagere (Br), Mitlakatte (Br)
73493 97287, 97417 46205

**ಮನೆ ಬಾಡಿಗೆಗೆ ಇದೆ**
ಶ್ರೀ ಗುರು ಕೊಟ್ಟೂರೇಶ್ವರ ಬಡಾವಣೆ, ಗಣೇಶ್ ಮಿಲ್ ಹತ್ತಿರ, ನಾಲ್ಕು ಬೆಡ್ರೂಮ್ ಮನೆ ಬಾಡಿಗೆಗೆ ಇದೆ.
98803 99998, 97414 48981

**ಮನೆಗಳು ಲೀಸ್‌ಗೆ ಹಾಗೂ ಬಾಡಿಗೆಗೆ**
ಹದಡಿ ರೋಡ್, ಶ್ರೀನಿವಾಸ ನಗರ 4ನೇ ಕ್ರಾಸ್, ತರಳಬಾಳು ಶಾಲೆ ಹತ್ತಿರ, ದಾವಣಗೆರೆ ಇಲ್ಲಿ ಡಬಲ್ ಬೆಡ್ ರೂಂ, 2ನೇ ಮಹಡಿ ಸುಸಜ್ಜಿತ ಮನೆ ಲೀಸ್ ಗೆ ಹಾಗೂ ಮೂರು ಬೆಡ್ ರೂಂ 1ನೇ ಮಹಡಿ ಸುಸಜ್ಜಿತ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
ಮೊ : 9972342941

**ಮನೆ ಬಾಡಿಗೆ ಇದೆ**
ನೂತನವಾಗಿ ನಿರ್ಮಿಸಿರುವ 30x50 ಸೈಟ್ ಉಳ್ಳ ಮನೆ ಬಾಡಿಗೆ ಇದೆ. ಮೊದಲನೇ ಮಹಡಿ, ಎರಡನೇ ಮಹಡಿ 1 BHK ಜೆ.ಹೆಚ್. ಪಟೇಲ್ ಬಡಾವಣೆ 3ನೇ ಮೇನ್, 2 ನೇ ಕ್ರಾಸ್, 'ಇ' ಬ್ಲಾಕ್ ದಾವಣಗೆರೆ.
70199 24038 94484 43198

**ಮನೆ ಬಾಡಿಗೆಗೆ/ಲೀಸ್‌ಗೆ ಇದೆ**
20x40 sqft, #523/37, ಶ್ರೀ ಸಿದ್ಧಗಂಗಾ ಹೊಸ ಬಡಾವಣೆ, ಟಾಟಾ ಕಾರ್ ಶೋ ರೂಂ ಹಿಂಭಾಗ , ಆವರಗೆರೆಯಲ್ಲಿ ಒಳ್ಳೆಯ ಇಂಟೀರಿಯರ್, ಟೀಕ್ ಮರದ ಕಿಟಕಿ, ಬಾಗಿಲುಗಳನ್ನೊಳಗೊಂಡ (ಟ್ರಿಪ್ಲೆಕ್ಸ್) ನಾಲ್ಕು ಬೆಡ್ ರೂಂಗಳ ಹೊಸ ಮನೆ ಬಾಡಿಗೆಗೆ/ಲೀಸ್‌ಗೆ ಇದೆ. ಸಂಪರ್ಕಿಸಿ:
99720 13331

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿ ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ.
ಫೋ. : 88920 08800

**ಚಿಕ್ಕ ಮನೆಗಳು ಬಾಡಿಗೆಗೆ**
ಶಕ್ತಿ ನಗರದಲ್ಲಿ ಚಿಕ್ಕ ಮನೆಗಳು ಬಾಡಿಗೆಗೆ ದೊರೆಯುತ್ತವೆ.
94484 39639

**ಮಳಿಗೆ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಬಳಿಯ ಶಾಂತಲಾ ಸಿಲ್ಕ್ ಪಕ್ಕದಲ್ಲಿ 14x34 ಅಳತೆಯ ಮಳಿಗೆ ಬಾಡಿಗೆಗಿದೆ.
ಸಂಪರ್ಕಿಸಿ.
94481-27787

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ (ಕೋರಿಯರ್ ಸೌಲಭ್ಯವಿದೆ)
8749098879

**ಬೇಕಾಗಿದ್ದಾರೆ**
ಮಗುವಿಗೆ ಪಾಲನೆ, ಪೋಷಣೆ ಮಾಡಲು ಹಿಂದೂ ಮಹಿಳೆ ಬೇಕಾಗಿದ್ದಾರೆ (ಸಮಯ ಬೆಳಗ್ಗೆ 9 ರಿಂದ ಸಂಜೆ 6 ಗಂಟೆವರೆಗೆ) ಶಿವಕುಮಾರ್ ಸ್ವಾಮಿ ಬಡಾವಣೆ, ಸಂಜೀವಿನಿ ಆಂಜನೇಯ ದೇವಸ್ಥಾನ ಹತ್ತಿರ, ಹದಡಿ ರಸ್ತೆ, ದಾವಣಗೆರೆ.
85480 87278, 63636 84129
9886144374

**ಮನೆ ಮತ್ತು ಮಳಿಗೆ ಬಾಡಿಗೆಗೆ ಇದೆ**
ಬಿ.ಟಿ. ಲೇಔಟ್, ಆರ್.ಎಮ್.ಸಿ. ಲಿಂಕ್ ರಸ್ತೆ ಹತ್ತಿರ, ಎರಡು ಬೆಡ್ರೂಮ್ ಮನೆ ಮತ್ತು ಮಳಿಗೆ ಬಾಡಿಗೆಗೆ ಲಭ್ಯ, ನಿರ್ಮಲ ಹೆಲ್ತ್ ಸೆಂಟರ್ ಹತ್ತಿರ.
94484-15442,94803-42663

**3 BHK LEASE FIRST FLOOR**
2396/12, 10th Cross, 16th Main Road, MCC `A' Block, Davangere- 577004
83830 19890,98994 14922

**ಬೇಕಾಗಿದ್ದಾರೆ**
PUC / DEGREE ಆದ ಮಹಿಳೆಯರು ರ್‍ಯಾಕ್‌ನಿಂದ ಸ್ಟಾಕ್ ತೆಗೆಯಲು ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ. ಭೇಟಿ ಮಾಡುವ ಸಮಯ ಸಂಜೆ: 6.30 ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**ಬೇಕಾಗಿದ್ದಾರೆ**
ಮನೆಗಳಿಗೆ ಸಿಲಿಂಡರ್ ವಿತರಣೆ ಮಾಡಲು, ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ. ಆಪೆ ಆಟೋ ಅಥವಾ ಇತರೆ ವಾಹನ ಇದ್ದವರಿಗೆ ಆದ್ಯತೆ ನೀಡಲಾಗುವುದು.
ಆಸಕ್ತರು ಸಂಪರ್ಕಿಸಿ, ಹೊಸಂಗಡಿ ಗ್ಯಾಸ್ ಏಜೆನ್ಸಿ, ಗಾಂಧಿ ನಗರ, ಹರಿಹರ.
98440 08136, 99166 70799

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
4ನೇ ಲಕ್ಕಿ ಡಿಪ್ ಡ್ರಾ ವಿನ್ನರ್
254
ಚನ್ನಬಸಯ್ಯ .ಎಂ.ಆರ್
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ
8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**SPACE TO-LET**
in P.J. Extension for commercial purpose only.
Contact :
97312 82368

**WALK IN INTERVIEW**
B.A, B.ED, BSC, B.ED
Any degree with NTC D.ED
Fluency in English is andatory.
Good communication is preferred.
89700-76881

**ಬೇಕಾಗಿದ್ದಾರೆ**
2023-24ನೇ ಸಾಲಿಗೆ ಶಿಕ್ಷಕಿಯರು ಬೇಕಾಗಿದ್ದಾರೆ.
* BA, BEd or BSc, BEd, ಮುಖ್ಯ ಶಿಕ್ಷಕಿ ಹುದ್ದೆ 1 (5 ವರ್ಷಗಳ ಅನುಭವ), * PUC /BA /B.Com /BSc /NTC ಶಿಕ್ಷಕಿಯರ ಹುದ್ದೆ - 6, * DEd /BA / B.Com ಶಿಕ್ಷಕಿಯರ ಹುದ್ದೆ 6, * BA /Bed ಶಿಕ್ಷಕಿಯರ ಹುದ್ದೆ - 6
* ಆಯಾ ಕೆಲಸಕ್ಕೆ ಹುದ್ದೆ 2 SSLC Pass or Fail
ಕಾರ್ಯದರ್ಶಿಗಳು, ಜ್ಞಾನದೀಪ ಪಬ್ಲಿಕ್ ಸ್ಕೂಲ್ (ಇಂಗ್ಲೀಷ್ ಮೀಡಿಯಂ)
60 ಅಡಿ ರಿಂಗ್ ರಸ್ತೆ, ನಿಟ್ಟುವಳ್ಳಿ, ದಾವಣಗೆರೆ- 577004.
9449679346, 8971018943

**ಬೇಕಾಗಿದ್ದಾರೆ**
ವಿವಿಧ ಕೆಲಸಗಳಿಗೆ ಬೇಕಾಗಿದ್ದಾರೆ. ಪುರುಷರು, ಮಹಿಳೆಯರು ಸ್ವಾಗತಕಾರರು, ಸೆಕ್ಯೂರಿಟಿ ಗಾರ್ಡ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. ಪಾರ್ಟ್‌ಟೈಂ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
79751 07268

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಭಟ್ಟರು, ದೋಸೆ, ಚೈನೀಸ್ ಹಾಗೂ ಸಹಾಯಕರು ಬೇಕಾಗಿದ್ದಾರೆ.
ಸಂಪರ್ಕಿಸಿ :
93537 16855

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ನೇರ ಪರೀಕ್ಷೆಗಳು**
SSLC, PUC, BA, B.Com, BBA, MBA (ALL) B.Tech, Diploma, ITI, NTC,
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್
ಶ್ರೀ ಗಂಗೋತ್ರಿ ಕರೆಸ್ಪಾಂಡೆನ್ಸ್ ಕಾಲೇಜ್
ಲಾಯರ್ ರೋಡ್, ದಾವಣಗೆರೆ.
ಫೋ. : 86602 35013

**ರಕ್ತ ದಾನ ಶ್ರೇಷ್ಠ ದಾನ**

**WANTED**
Any Degree with Computer knoweldge is must. for Male & Female. Contact :
Excellent Electronics,
#2137/1, 4th Main, 3rd Cross, MCC A Block, Davanagare. 577004.
Tel No. 98865 15100

**WANTED**
Boys & Girls required for billing job at Food Mart Supermarket.
Quali : B.Com, Any Degree.
M : 98864 63531

**ಲೋನ್ ಕೊಡಲಾಗುತ್ತದೆ**
ವೈಯಕ್ತಿಕ ಸಾಲ, ವ್ಯಾಪಾರ ಸಾಲ, ಆಸ್ತಿ ಮೇಲೆ ಸಾಲ, ಆಸ್ತಿ ಖರೀದಿಗೆ ಸಾಲ ಕೊಡಲಾಗುತ್ತದೆ.
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ :
ಫೋ. : 74835 24662

**2BHK ಮನೆ ಬಾಡಿಗೆಗೆ ಇದೆ**
(East Facing)
2 BHK House for rent in Nijalingappa Badavane, 1st Main, 4th cross, Davanagere.
93800 40358

**To-Let / ಮನೆ ಬಾಡಿಗೆಗೆ**
1 BHK, ವೀಣಾ ಕ್ಲಿನಿಕ್ ಹತ್ತಿರ, ಕೆಎಸ್‌ಆರ್‌ಟಿಸಿ ಹಿಂಭಾಗ, ಭಗತ್ ಸಿಂಗ್ ನಗರ, ದಾವಣಗೆರೆ.
93410 95651, 99161 79100

**ಮನೆ ಮಾರಾಟಕ್ಕಿದೆ**
ವಿದ್ಯಾ ನಗರ ಎಲ್.ಐ.ಸಿ ಕಾಲೋನಿ, ನೂತನ್ ಕಾಲೇಜ್ ಹಿಂಭಾಗ, 30x50ಅಳತೆಯ ಗ್ರೌಂಡ್ ಫ್ಲೋರ್+ ಡುಪ್ಲೆಕ್ಸ್ 3BHK ಮನೆ , ಫಸ್ಟ್ ಫ್ಲೋರ್ ನಲ್ಲಿ 2BHK ಮನೆ , ಸೆಕೆಂಡ್ ಫ್ಲೋರ್ ನಲ್ಲಿ 1BHK ಮನೆ, ಒಟ್ಟು 36 ಚದುರದ ಕಟ್ಟಡ ಮಾರಾಟಕ್ಕಿದೆ.
ಫೋ. : 99863 16672

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ, ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ: 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಸ್.ಐ. ದೊಡ್ಡಮನಿ
[illegible] ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್‌ಸ್ಟ್ಯಾಂಡ ಎದುರಿಗೆ, ಹುಬ್ಬಳ್ಳಿ
M:9740523710

**WANTED TEACHERS**
☛ An Experienced lady Teachers with Excellent English Skill
☛ English - 4 BA., B.Ed.,
☛ English - 4 -----, BA., B.Ed., English Major
☛ Maths - 4 BSc., B.Ed., MSc.,
☛ Social Science - 3 BA., B.Ed., BSc., - 3 Post
☛ Computer Teacher, BSc., Computer
St Mary's Convent School, Science & Commerce College
94497 02778, 94819 09493

**OFFICE SPACE FOR RENT**
Finance, Mini Bank, Co-op. Bank, ETC with wash room facility
N.R. Road, Davangere.
94483 69523

**TO - LET**
3 BHK ground floor Suitable for Godown & commercial (south)
2 BHK first floor (East)
#303/4, `Rohini complex'
P.J. Extension, 2nd Main Road, Stadium Road, Davangere.
96111 74878, 89707 89513

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**CHANGE OF NAME**
I Sadiq Basha S.o Mohammed Ibrahim, Previously called MOHAMMED SADIK BASHA S/O MOHAMMED IBRAHIM, R/o #1239/3, 2nd Main, 6th Cross, K.T.J Nagara, Davanagere. 577002. Karnataka have changed my name as SADIQ BASHA, S/O MOHAMMED IBRAHIM vide Affidavit dated 10.03.2023 sworn before Notary M.Prathaparudra Davanagere. henceforth all my transactios & dealings will be in my new name SADIQ BASHA S/O MOHAMED IBRAHIM

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಎವಿಕೆ ರಸ್ತೆಯಲ್ಲಿ 3500 ಅಡಿ ಖಾಲಿ ಜಾಗ ಬಾಡಿಗೆಗೆ ಇದೆ**
Looking for a prime commercial space on AVK College Road?
Perfect for Used car Sales, Warehouses, Vehicle Wash/Service and Granite/Tile Showrooms
Easy Access to Major Roads and Higways
951 369 9252

# ಎಸ್ಸೆಸ್ಸೆಮ್ ಟ್ರೋಫಿ-ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ



ದಾವಣಗೆರೆ, ಮಾ. 10- ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಸಹಯೋಗದಲ್ಲಿ ಇಂದಿನಿಂದ 3 ದಿನಗಳವರೆಗೆ ಕಾಲೇಜಿನ ಮೈದಾನದಲ್ಲಿ ಬಾಪೂಜಿ ವಿದ್ಯಾಸಂಸ್ಥೆ ವ್ಯಾಪ್ತಿಯ ಕಾಲೇಜುಗಳ 'ಎಸ್ಸೆಸ್ಸೆಮ್ ಟ್ರೋಫಿ- ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಲಾಯಿತು.

ವಿವಿಧ ಕಾಲೇಜುಗಳ 17 ತಂಡಗಳು ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದವು. ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರು ಗಿರೀಶ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿ, ಕ್ರೀಡೆಗಳು ಮನುಷ್ಯನ ಮನಸ್ಸನ್ನು ತಿಳಿಗೊಳಿಸಿ ಸಂತೋಷ ಉಂಟು ಮಾಡುತ್ತವೆ. ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಹೆಚ್ಚು ಹೆಚ್ಚು ಭಾಗವಹಿಸುವ ಮೂಲಕ ಲಾಭ ಪಡೆಯುವಂತೆ ಕರೆ ನೀಡಿದರು.

ಕಾಲೇಜಿನ ಪ್ರಾಚಾರ್ಯ ಡಾ.ಹೆಚ್.ಬಿ. ಅರವಿಂದ್ ಅಧ್ಯಕ್ಷತೆ ವಹಿಸಿದ್ದರು. ಎ.ವಿ.ಕೆ. ಕಾಲೇಜಿನ ಪ್ರಾಚಾರ್ಯ ಡಾ.ಬಿ.ಪಿ. ಕುಮಾರ್, ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಸಾರ್ವಜನಿಕ ಸಂಪರ್ಕ ಡೀನ್ ಡಾ.ಜಿ.ಪಿ. ದೇಸಾಯಿ ಮತ್ತಿತರರು ಉಪಸ್ಥಿತರಿದ್ದರು.

# ಶ್ರೀ ಅನ್ನದಾನೀಶ್ವರ ಮಠವು ಜಾತಿ, ಮತ, ಪಂಥ ಮೀರಿದ ಮಠ

ದಾವಣಗೆರೆ, ಮಾ.10- ಉದ್ಯಮಿ ಅಥಣಿ ವೀರಣ್ಣನವರಿಗೆ ಗೌರವ ಡಾಕ್ಟರೇಟ್ ಬಂದಿರುವುದು, ಅನ್ನದಾನೀಶ್ವರ ಮಠಕ್ಕೇ ನೀಡಿದಷ್ಟು ಸಂತೋಷವಾಗಿದೆ ಎಂದು ಹಾಲಕೆರೆ ಸಂಸ್ಥಾನ ಮಠದ ಜಗದ್ಗುರು ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮೀಜಿ ಹೇಳಿದರು.

ಇಲ್ಲಿನ ಅನ್ನದಾನೀಶ್ವರ ಮಠದಲ್ಲಿ ದಾವಣಗೆರೆ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದ ಟ್ರಸ್ಟ್ ಅಧ್ಯಕ್ಷ ಅಥಣಿ ವೀರಣ್ಣ ಅವರಿಗೆ ಶುಕ್ರವಾರ ಶ್ರೀ ಅನ್ನದಾನೀಶ್ವರ ಸಾರ್ವಜನಿಕ ಸೇವಾ ಟ್ರಸ್ಟ್‌ನಿಂದ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಅಥಣಿ ವೀರಣ್ಣನವರು ಶ್ರೀಮಠದ ಅಧ್ಯಕ್ಷರಾಗಿ ಅಲ್ಲದೇ, ಹಲವಾರು, ಮಠ, ಶಿಕ್ಷಣ ಸಂಸ್ಥೆಗಳ ಜವಾಬ್ದಾರಿಯೊಂದಿಗೆ ಹಿರಿಯ ಲೆಕ್ಕ ಪರಿಶೋಧಕರಾಗಿ ಸಮಾಜಮುಖಿ ಕಾರ್ಯಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ ಎಂದರು.



ಹಾಲಕೆರೆ ಸಂಸ್ಥಾನ ಮಠದ ಜಗದ್ಗುರು ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮೀಜಿ

ಶ್ರೀ ಅನ್ನದಾನೀಶ್ವರ ಸಾರ್ವಜನಿಕ ಸೇವಾ ಟ್ರಸ್ಟ್‌ನಿಂದ ಇಲ್ಲಿ ಕಲ್ಯಾಣ ಮಂಟಪ ಕಟ್ಟುವ ಯೋಜನೆ ನಮ್ಮೆಲ್ಲರ ಉದ್ದೇಶವಾಗಿದೆ. ಈ ಹಿಂದೆ ಕಲ್ಯಾಣ ಮಂಟಪ ಕಟ್ಟಲು ವಾಗ್ದಾನ ಮಾಡಿದಂತೆ ದಾನಿಗಳು ಸಹಾಯ ಮಾಡಬೇಕು. ಅಥಣಿ ವೀರಣ್ಣನವರ ಮಾರ್ಗದರ್ಶನದಲ್ಲಿ ಟ್ರಸ್ಟ್‌ನ ಅಡಿವೆಪ್ಪ, ವೀರಪ್ಪ ಎಂ. ಬಾವಿ ಎಲ್ಲರೂ ಮುಂದಾಳತ್ವ ವಹಿಸಿಕೊಂಡು, ದಾನಿಗಳಿಂದ ಧನ ಸಹಾಯ ಪಡೆದು, ಕಟ್ಟಡ ಕಾರ್ಯಕ್ರಮ ಆರಂಭಿಸಬೇಕೆಂದು ಕರೆ ನೀಡಿದರು.

ಶ್ರೀ ಅನ್ನದಾನೀಶ್ವರ ಮಠವು ಜಾತಿ, ಮತ, ಪಂಥ ಮೀರಿದ ಮಠವಾಗಿದ್ದು, ಸರ್ವ ಜನಾಂಗದ ಶಾಂತಿಯ ತೋಟವಾಗಿದೆ. ನಮ್ಮ ಹಿರಿಯ ಗುರುಗಳು ಸ್ವಾತಂತ್ರ್ಯ ಪೂರ್ವದಲ್ಲಿಯೇ ಶಿಕ್ಷಣ, ಪ್ರಸಾದಕ್ಕೆ ಒತ್ತುನೀಡಿ ಮಠವನ್ನು ಈ ಮಟ್ಟಕ್ಕೆ ಬೆಳೆಸಿದ್ದಾರೆ. ನಾವು ನೀವೆಲ್ಲರೂ ಸೇರಿ ಇನ್ನೂ ಎತ್ತರಕ್ಕೆ ಬೆಳೆಸೋಣ ಎಂದು ಹೇಳಿದರು.

ಸನ್ಮಾನ ಸ್ವೀಕರಿಸಿದ ಅಥಣಿ ವೀರಣ್ಣ ಮಾತನಾಡಿ, ಶ್ರೀಗಳಿಂದ ನನಗೆ ಇಲ್ಲಿ ಗೌರವಿಸಿರುವುದು ನನಗೆ ಸಂತೋಷ ತಂದಿದೆ. ಶ್ರೀಗಳ ಭಕ್ತರ ಆಶಯದಂತೆ ಇಲ್ಲಿ ಕಲ್ಯಾಣ ಮಂಟಪ ನಿರ್ಮಾಣಕ್ಕೆ ಸುಮಾರು 2 ಕೋಟಿ ರೂ.ಅವಶ್ಯಕತೆ ಇದೆ. ಶ್ರೀಗಳು ದಾನಿಗಳ ಮನೆಗೆ ಪಾದಪೂಜೆಗೆ ಬರುವುದಾಗಿ ತಿಳಿಸಿದ್ದಾರೆ. ಕಲ್ಯಾಣ ಮಂಟಪ ಆಗಲೇಬೇಕು. ಈ ಕಲ್ಯಾಣ ಮಂಟಪ ಬಡವ, ಮಧ್ಯಮ ವರ್ಗದ ಜನತೆಗೆ ಅನುಕೂಲವಾಗಬೇಕು. ದಾನಿಗಳ ಸಹಕಾರದಿಂದ ಕಲ್ಯಾಣ ಮಂಟಪ ಕಟ್ಟಿಸೋಣ. ಕಡಿಮೆ ಆದರೆ ಸಾಲ ತೆಗೆದುಕೊಂಡು ಕಟ್ಟಿಸೋಣ ಎಂದರು.

ಕಾರ್ಯಕ್ರಮದಲ್ಲಿ ದಾವಣಗೆರೆ ಅರ್ಬನ್ ಬ್ಯಾಂಕ್ ಉಪಾಧ್ಯಕ್ಷ ಅಂದನೂರು ಮುಪ್ಪಣ್ಣ, ನಿರ್ದೇಶಕ ದೇವರಮನಿ ಶಿವಕುಮಾರ್, ಉದ್ಯಮಿಗಳಾದ ವೈ.ಬಿ. ಸತೀಶ್, ಜಿ.ಎಸ್. ಉಳವಯ್ಯ, ಟ್ರಸ್ಟ್ ಉಪಾಧ್ಯಕ್ಷ ಅಮರಯ್ಯ ಗುರುವಿನಮಠ, ಕೆ. ಟಿ. ಮಹಾಲಿಂಗೇಶ್, ಅಡಿವೆಪ್ಪ ಸೇರಿದಂತೆ ಇತರರು ಇದ್ದರು.

ಇಂದಿನ ಸುದ್ದಿ ಸಂಪಾದಕ ವೀರಪ್ಪ ಎಂ.ಭಾವಿ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

# ಅಂಗನವಾಡಿ ಕಾರ್ಯಕರ್ತೆಯರ, ಸಹಾಯಕಿಯರ ಸಮ್ಮೇಳನ ಇಂದು

ದಾವಣಗೆರೆ : ತಾಲ್ಲೂಕು ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ 10ನೇ ತಾಲ್ಲೂಕು ಸಮ್ಮೇಳನ ಇಂದು (11-03-2023ರ) ಬೆಳಿಗ್ಗೆ 11 ಗಂಟೆಗೆ ಶ್ರೀ ಚೌಡೇಶ್ವರಿ ದೇವಸ್ಥಾನ ಐ.ಟಿ.ಐ. ಕಾಲೇಜ್ ಹಿಂಭಾಗ, ಇಲ್ಲಿ ತಾಲ್ಲೂಕು ಸಮ್ಮೇಳನ ನಡೆಸಲಾಗುವುದು. ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಸಮಯಕ್ಕೆ ಸರಿಯಾಗಿ ಭಾಗವಹಿಸಿ, ಸಮ್ಮೇಳನ ಯಶಸ್ವಿಗೊಳಿಸಬೇಕೆಂದು ಜಿಲ್ಲಾಧ್ಯಕ್ಷರು ಎಂ.ಬಿ. ಶಾರದಮ್ಮ, ಪ್ರಧಾನ ಕಾರ್ಯದರ್ಶಿ ಎಸ್.ಎಸ್. ಮಲ್ಲಮ್ಮ, ಖಜಾಂಚಿ ವಿಶಾಲಾಕ್ಷಿ, ಸರ್ವಮ್ಮ, ರೇಣುಕಮ್ಮ, ಕಾಳಮ್ಮ, ಸುಧಮ್ಮ ಇನ್ನೂ ಮುಂತಾದವರು ತಿಳಿಸಿದ್ದಾರೆ.

# ಸೇವೆ ಖಾಯಂಗಾಗಿ ಎನ್‌ಹೆಚ್‌ಎಂ ನೌಕರರ ಪ್ರತಿಭಟನೆ



ದಾವಣಗೆರೆ, ಮಾ.10- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್.ಹೆಚ್.ಎಂ) ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಳಗುತ್ತಿಗೆ ನೌಕರರನ್ನು ಖಾಯಂಗೊಳಿಸುವಂತೆ ಒತ್ತಾಯಿಸಿ, ಶುಕ್ರವಾರ ಎನ್.ಹೆಚ್.ಎಂ ನೌಕರರು ಜಿಲ್ಲಾಸ್ಪತ್ರೆ ಆವರಣದ ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಇಂದು ಪ್ರತಿಭಟನೆ ನಡೆಸಿದರು.

ರಾಜ್ಯದಾದ್ಯಂತ ಮೂವತ್ತು ಸಾವಿರಕ್ಕೂ ಹೆಚ್ಚು ಒಳಗುತ್ತಿಗೆ ನೌಕರರು ಕಳೆದ 10-20 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ಕೋವಿಡ್-19 ರಂತಹ ಮಾರಕ ಕಾಯಿಲೆ ಸಂದರ್ಭದಲ್ಲಿ ಸೋಂಕಿತರ ಆರೈಕೆ, ವ್ಯಾಕ್ಸಿನ್ ಕೊಡುವುದರಲ್ಲಿ ಅತ್ಯಂತ ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸಿ, ಇಲಾಖೆ ಹಾಗೂ ಸರ್ಕಾರಕ್ಕೆ ಗೌರವ ತಂದು ಕೊಡುವುದರ ಜೊತೆಗೆ ಸಾರ್ವಜನಿಕರ ಆರೋಗ್ಯ ಕಾಪಾಡಲು ಶ್ರಮಿಸಿದ್ದೇವೆ. ಆದರೆ, ಪ್ರಾಮಾಣಿಕ ಸೇವೆಯನ್ನು ಸರ್ಕಾರ ಪರಿಗಣಿಸಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಫೆ.13 ರಿಂದ ರಾಜ್ಯ ಸಂಘದ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನವನದಲ್ಲಿ ಮುಷ್ಕರ ನಡೆಸುತ್ತಿದ್ದು, ಸರ್ಕಾರ ನಮ್ಮ ಬೇಡಿಕೆ ಈಡೇರಿಸಲು ಮುಂದಾಗಬೇಕು. ಮಣಿಪುರ, ಒಡಿಶಾ, ರಾಜಸ್ಥಾನ, ಪಂಜಾಬ್ ಮತ್ತು ಹಿಮಾಚಲ ಪ್ರದೇಶ ಸರ್ಕಾರಗಳು ಈಗಾಗಲೇ ಒಳಗುತ್ತಿಗೆ ನೌಕರರ ಸೇವೆಯನ್ನು ಖಾಯಂಗೊಳಿಸುವ ಪ್ರಕ್ರಿಯೆ ಪ್ರಾರಂಭಿಸಿದ್ದು, ಆ ಮಾದರಿಯಲ್ಲಿಯೇ ಕರ್ನಾಟಕ ಸರ್ಕಾರವು ನೌಕರರ ಸೇವೆ ಖಾಯಂಗೊಳಿಸಬೇಕೆಂದು ಮನವಿ ಮಾಡಿದರು.

ಈ ವೇಳೆ ಒಳಗುತ್ತಿಗೆ ನೌಕರರ ಸಂಘದ ಜಿಲ್ಲಾಧ್ಯಕ್ಷ ಮಂಜುನಾಥ್, ಸುರೇಶ್ ಕುಮಾರ್, ಜಗದೀಶ್, ಮಹಾಲಿಂಗಪ್ಪ, ಶ್ರೀನಿವಾಸ, ಬಸವರಾಜ್ ರಾವ್, ವೆಂಕಟೇಶ್, ಮಂಜುನಾಥ್, ಸುರೇಖಾ, ಪುಷ್ಪಲತಾ, ಶೋಭಾ, ಆಶಾ ದೊಡ್ಮನೆ ಶಿವರಾಯಪ್ಪ ಮತ್ತಿತರರಿದ್ದರು.

# ಅಂಬೇಡ್ಕರ್‌ಗೆ ಅಪಮಾನ ; ವಾರ್ಡನ್ ಅಮಾನತ್ತಿಗೆ ಆಗ್ರಹ

ದಾವಣಗೆರೆ, ಮಾ.10- ಗಣರಾಜ್ಯೋತ್ಸವ ದಿನದಂದು ಡಾ. ಬಿ.ಆರ್ ಅಂಬೇಡ್ಕರ್ ಭಾವಚಿತ್ರ ಇಡದೇ ಅಕ್ಷಮ್ಯ ಅಪರಾಧವೆಸಗಿ, ಅಧಿಕಾರ ದರ್ಪ ತೋರುತ್ತಿರುವ ವಾರ್ಡನ್ ಸುಧಾ ಅವರನ್ನು ಕೂಡಲೇ ಸೇವೆಯಿಂದ ಅಮಾನತ್ತುಗೊಳಿಸುವಂತೆ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ. ಬಿ.ಕೃಷ್ಣಪ್ಪ ಸ್ಥಾಪಿತ) ಜಿಲ್ಲಾ ಸಂಚಾಲಕ ಕುಂದುವಾಡ ಮಂಜುನಾಥ್ ಆಗ್ರಹಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸಕ್ತ ವರ್ಷದ ಜನವರಿ 26 ರಂದು ಗಣರಾಜ್ಯೋತ್ಸವ ಸಂದರ್ಭದಲ್ಲಿ ಡಾ.ಬಿ. ಆರ್ ಅಂಬೇಡ್ಕರ್‌ರವರ ಭಾವಚಿತ್ರ ಇರಿಸದೇ ಕರ್ತವ್ಯಲೋಪ ಎಸಗಿರುವ ವಾರ್ಡನ್ ಸುಧಾರವರ ಮೇಲೆ ಕ್ರಮ ಕೈಗೊಳ್ಳುವಂತೆ ಜಿಲ್ಲಾಡಳಿತಕ್ಕೆ ಈವರೆಗೂ ಯಾವುದೇ ಕ್ರಮ ಕೈಗೊಳ್ಳದಿರುವುದು ಖಂಡನೀಯ ಎಂದರು.

ಸುದ್ದಿಗೋಷ್ಠಿಯಲ್ಲಿ ತಾಲ್ಲೂಕು ಸಂಚಾಲಕರಾದ ಚಿತ್ರಲಿಂಗಪ್ಪ, ಅಣಜಿ ಹನುಮಂತಪ್ಪ, ಪಿ.ಜೆ ಮಹಾಂತೇಶ್, ವಿದ್ಯಾರ್ಥಿ ಒಕ್ಕೂಟದ ಲಿಂಗರಾಜ್, ಸಂಘಟನಾ ಸಂಚಾಲಕರಾದ ಪ್ರದೀಪ್ ಕೆ.ಟಿ.ಜೆ ನಗರ, ಹಾಲುವರ್ತಿ ಮಹಾಂತೇಶ್, ಬನ್ನಿಹಟ್ಟಿ ನಿಂಗರಾಜ್, ಮಂಜುನಾಥ್ ಎಲೆಕ್ಟ್ರಿಕಲ್, ಕುಂದೂರು ರಾಜಪ್ಪ, ಅಣಜಿ ನಿಂಗಪ್ಪ, ಚಿತ್ತನಹಳ್ಳಿ ನಾಗರಾಜ್, ಬೇತೂರು ಹನುಮಂತ ಮತ್ತಿತರರಿದ್ದರು.

# ಭ್ರಷ್ಟಾಚಾರ : ಬೊಮ್ಮಾಯಿ ರಾಜೀನಾಮೆಗೆ ಆಪ್ ಆಗ್ರಹ




ದಾವಣಗೆರೆ, ಮಾ.10- ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿ.ಜೆ.ಪಿ. ಯಲ್ಲಿ ಭ್ರಷ್ಟಾಚಾರ ಮಿತಿಮೀರಿದ್ದು, ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಳ್ಳುವಲ್ಲಿ ವಿಫಲರಾದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಆಮ್ ಆದ್ಮಿ ಪಕ್ಷದ ಜಿಲ್ಲಾ ಘಟಕದ ಪದಾಧಿಕಾರಿಗಳು ಶುಕ್ರವಾರ ನಗರದ ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಿ, ಉಪವಿಭಾಗಾಧಿಕಾರಿ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಆಪ್ ಜಿಲ್ಲಾಧ್ಯಕ್ಷ ಚಂದ್ರು ಬಸವಂತಪ್ಪ, ಶ್ರೀಧರ್ ಪಾಟೀಲ್ ಮಾತನಾಡಿ, ಭ್ರಷ್ಟಾಚಾರ ಪ್ರಕರಣದಲ್ಲಿ ಜೈಲು ಪಾಲಾಗಬೇಕಿದ್ದ ಆರೋಪಿ ಸ್ಥಾನದಲ್ಲಿರುವ ಮಾಡಾಳ್ ವಿರುಪಾಕ್ಷಪ್ಪನವರಿಗೆ ಸರ್ಕಾರದಿಂದ ರಾಜಾತಿಥ್ಯ ನೀಡಲಾಗಿದೆ. ಸಾಕ್ಷಿ ನಾಶಪಡಿಸಿ ಕಾನೂನು ಕುಣಿಕೆಯಿಂದ ತಪ್ಪಿಸಿಕೊಳ್ಳಲು ಬಿ.ಜೆ.ಪಿ.ಗೆ ಸಿಕ್ಕಿರುವ ಪವಿತ್ರ ರಾಜ್ಯಾಧಿಕಾರ ದುರ್ಬಳಕೆಯಾಗುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಶಾಸಕರು ಹೈಕೋರ್ಟ್ ಜಾಮೀನು ಪಡೆದುಕೊಂಡಿದ್ದು ಭ್ರಷ್ಟಾಚಾರ ಪ್ರಕರಣದಲ್ಲಿ ತೊಡಗಿಕೊಂಡವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಲ್ಲಿ ವಿಫಲರಾದ ಮುಖ್ಯಮಂತ್ರಿ ಬೊಮ್ಮಾಯಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘಟನಾ ಕಾರ್ಯದರ್ಶಿ ಆದಿಲ್ ಖಾನ್, ಶ್ರೀಧರ್ ಪಾಟೀಲ್, ಶಬ್ಬೀರ್ ಅಹಮ್ಮದ್, ರವೀಂದ್ರ.ಕೆ, ಸಿದ್ದಪ್ಪ, ಗಣೇಶ್ ದುರ್ಗದ, ಕಲ್ಲೇಶ್ ಕೆ.ಟಿ, ಆಯಿಷಾ, ರೋಹಿತ್, ಸಮೀರ್, ಹಾಲಸ್ವಾಮಿ ಮತ್ತಿತರರಿದ್ದರು.

# ಕುಡಿವ ನೀರಿನ ಕೆರೆಗಳಿಗೆ ಮೇಯರ್ ನೇತೃತ್ವದ ತಂಡ ಭೇಟಿ



ದಾವಣಗೆರೆ, ಮಾ.10- ನಗರದ ಕುಡಿಯುವ ನೀರಿನ ಮೂಲವಾಗಿರುವ ಟಿ.ವಿ. ಸ್ಟೇಷನ್ ಹಾಗೂ ಕುಂದುವಾಡ ಕೆರೆಗೆ ಮೇಯರ್ ವಿನಾಯಕ ಪೈಲ್ವಾನ್ ನೇತೃತ್ವದ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿತು.

ನೀರಿನ ಸಂಗ್ರಹ ಮತ್ತು ಸರಬರಾಜು ಆಗುತ್ತಿರುವ ಕುರಿತಂತೆ ಮೇಯರ್ ಮಾಹಿತಿ ಪಡೆದರು. ಬೇಸಿಗೆ ಬರುತ್ತಿದೆ. ನೀರಿನ ಪೂರೈಕೆಯಲ್ಲಿ ಯಾವುದೇ ತೊಂದರೆ ಆಗದಂತೆ ಕ್ರಮ ಕೈಗೊಳ್ಳಬೇಕು. ಈಗಿನಿಂದಲೇ ಈ ಬಗ್ಗೆ ಎಚ್ಚರ ವಹಿಸುವಂತೆ ವಿನಾಯಕ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮಹಾನಗರ ಪಾಲಿಕೆ ಆಯುಕ್ತೆ ರೇಣುಕಾ, ಉಪ ಮೇಯರ್ ಯಶೋದ, ಪಾಲಿಕೆ ವಿರೋಧ ಪಕ್ಷದ ನಾಯಕ ಗಡಿಗುಡಾಳ್ ಮಂಜುನಾಥ್, ಸದಸ್ಯರಾದ ಕೆ. ಚಮನ್ ಸಾಬ್, ಮಾಜಿ ಮೇಯರ್ ಎಸ್. ಟಿ. ವೀರೇಶ್, ಕೆ. ಎಂ. ವೀರೇಶ್ ಅವರಿದ್ದ ತಂಡವು ಪಂಪ್ ಹೌಸ್ ಗೂ ಭೇಟಿ ನೀಡಿತು. ಕೆಟ್ಟು ಹೋಗಿದ್ದ ಮೋಟಾರ್ ಸರಿಪಡಿಸಲಾಗಿದ್ದು, ಅಲ್ಲಿಗೂ ಹೋಗಿ ಪರಿಶೀಲಿಸಲಾಯಿತು. ಮೋಟಾರ್ ಸರಿಪಡಿಸಿದ್ದು, ನೀರು ಸರಬರಾಜು ಆಗುತ್ತಿರುವುದನ್ನು ವೀಕ್ಷಿಸಲಾಯಿತು.

ವಿನಾಯಕ ಮಾತನಾಡಿ, ತಾನು ಕುಂದುವಾಡ ಕೆರೆ ಹಾಗೂ ಟಿ. ವಿ. ಸ್ಟೇಷನ್ ನಲ್ಲಿ ನೀರು ಸಂಗ್ರಹವಾಗಿದೆ. ಏನೇ ಸಮಸ್ಯೆ ಇದ್ದರೂ ನೇರ ನನ್ನ ಗಮನಕ್ಕೆ ತನ್ನಿ. ಯಾವುದೇ ಕಾರಣಕ್ಕೂ ಬೇಸಿಗೆಯಲ್ಲಿ ಜನರಿಗೆ ತೊಂದರೆ ಯಾಗಬಾರದು. ಈ ನಿಟ್ಟಿನಲ್ಲಿ ಈಗಿನಿಂದಲೇ ತಯಾರಿ ಮಾಡಿಕೊಳ್ಳಿ. ಯಾವುದೇ ಕಾರಣಕ್ಕೂ ಸಬೂಬು ಹೇಳಬೇಡಿ. ಜನರಿಗೆ ಯಾವುದೇ ರೀತಿಯ ತೊಂದರೆ ಆಗಬಾರದು. ಅಧಿಕಾರಿಗಳು ಆಗಾಗ್ಗೆ ಸ್ಥಳಕ್ಕೆ ಬಂದು ಪರಿಶೀಲಿಸಬೇಕು. ತೊಂದರೆ ಆದ ಕೂಡಲೇ ಗಮನಕ್ಕೆ ತಂದರೆ ಹೆಚ್ಚು ಸಮಸ್ಯೆಯಾಗದಂತೆ ನೋಡಿಕೊಳ್ಳಬಹುದು ಎಂದು ಹೇಳಿದರು.

ಕೆರೆಗಳಿಗೆ ಬೇಸಿಗೆ ವೇಳೆ ನೀರು ಸರಬರಾಜು ಮಾಡುವಷ್ಟು ಸಂಗ್ರಹ ಇದೆ. ತೊಂದರೆ ಏನಿಲ್ಲ. ಜಲಸಿರಿ ಯೋಜನೆಯಡಿ ಕೆಲವೆಡೆ ಕಾಮಗಾರಿ ನಡೆಯುತ್ತಿದೆ. ಹಾಗಾಗಿ, ಈ ಭಾಗಗಳಲ್ಲಿ ಸ್ವಲ್ಪ ತೊಂದರೆ ಆಗಬಹುದು. ಇಲ್ಲಿಯೂ ಹೆಚ್ಚು ಗಮನ ನೀಡಲಾಗಿದೆ. ಜನರಿಗೆ ತೊಂದರೆಯಾಗದಂತೆ ನೀರು ಪೂರೈಸಲಾಗುತ್ತಿದೆ ಎಂದು ಉದಯಕುಮಾರ್ ಮಾಹಿತಿ ನೀಡಿದರು.

# ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ 10 ಜನ ಕಾರ್ಮಿಕರಿಗೆ ಸೈಕಲ್ ವಿತರಣೆ




ದಾವಣಗೆರೆ,ಮಾ.10- ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ 10 ಬಡ ಕೂಲಿ ಕಾರ್ಮಿಕರಿಗೆ ಸೈಕಲ್‌ಗಳನ್ನು ವಿತರಿಸಲಾಯಿತು.

ಈ ಸಂದರ್ಭದದಲ್ಲಿ ಮಾತನಾಡಿದ ಕರುಣಾ ಟ್ರಸ್ಟಿನ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ, ವಾಹನಗಳ ಸಂಖ್ಯೆ ಹೆಚ್ಚಾಗಿ, ಅನಾರೋಗ್ಯಗಳು ಹಾಗೂ ಪರಿಸರ ಮಾಲಿನ್ಯ ಉಂಟಾಗುತ್ತಿದೆ. ಪೆಟ್ರೋಲ್ ದರ ಅತೀ ದುಬಾರಿಯಾಗಿ, ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಜೀವನ ನಿರ್ವಹಣೆಯೇ ಕಷ್ಟವಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಕೂಲಿ ಕಾರ್ಮಿಕರಿಗೆ ಮತ್ತು ಪೇಪರ್ ಹಾಕಿ ತಮ್ಮ ವ್ಯಾಸಂಗವನ್ನು ಮುಂದುವರೆಸುತ್ತಿರುವ ಬಡ ವಿದ್ಯಾರ್ಥಿಗಳಿಗೆ ಸಹಾಯಕವಾಗಲಿ ಎನ್ನುವ ಉದ್ದೇಶದಿಂದ 10 ಸೈಕಲ್‌ಗಳನ್ನು ವಿತರಿಸಿದ್ದೇವೆ. ದಯವಿಟ್ಟು ಸೈಕಲ್‌ಗಳನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದು ಅವರು ತಿಳಿಸಿದರು. ಇಂತಹ ಸತ್ಕಾರ್ಯಕ್ಕೆ ನೆರವಾದ ಟ್ರಸ್ಟಿನ ಎಲ್ಲಾ ದಾನಿಗಳಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿದ ಅವರು, ಇನ್ನೂ ಹೆಚ್ಚಿನ ಮಟ್ಟದಲ್ಲಿ ಧನಸಹಾಯ ಮಾಡಿ, ಟ್ರಸ್ಟಿನ ಸತ್ಕಾರ್ಯಗಳಿಗೆ ಕೈಜೋಡಿಸಬೇಕಾಗಿ ವಿನಂತಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ಎಂ.ಜಿ. ಈಶ್ವರಪ್ಪ ಮಾತನಾಡಿ, ಕೂಲಿ ಕಾರ್ಮಿಕರು ಕುಡಿತ, ತಂಬಾಕು ಇತ್ಯಾದಿ ದುಶ್ಚಟ ಬಿಟ್ಟು, ದೈಹಿಕ, ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬೇಕು. ಸೈಕಲ್ ಸವಾರಿಯಿಂದ ಉಳಿತಾಯ ಮಾಡಿದ ಹಣವನ್ನು ನಿಮ್ಮ ಶ್ರೀಮತಿಯವರಿಗೆ ನೀಡಿ, ಎಫ್.ಡಿ. ಮಾಡಿ ಎಂದು ಸೂಚಿಸಿದರು.

ಮುಖ್ಯ ಅತಿಥಿಗಳಾಗಿ ಶ್ರೀಮತಿ ನಿರ್ಮಲ ಕರಿಬಸಪ್ಪ ಮತ್ತು ಡಾ. ಕರಿಬಸಪ್ಪ ಆಗಮಿಸಿದ್ದರು. ಕರುಣಾ ಟ್ರಸ್ಟಿನ ನಿರ್ದೇಶಕರುಗಳಾದ ಪ್ರೊ. ಎಂ. ಬಸವರಾಜ್, ಬಸವರಾಜ್ ಒಡೆಯರ್, ಶ್ರೀಮತಿ ಮಂಜುಳಾ ಬಸವಲಿಂಗಪ್ಪ, ಮಧುಸೂದನ್, ಎನ್.ಪಿ.ಜಯ್ಯಣ್ಣ, ಶ್ರೀಮತಿ ಕಸ್ತೂರಿ ಮುಂತಾದವರು ಭಾಗವಹಿಸಿದ್ದರು.

# ಸೇವಾ ನ್ಯೂನತೆ; 'ಯುರೇಕಾ'ಗೆ ಜಿಲ್ಲಾ ಗ್ರಾಹಕರ ಆಯೋಗ ದಂಡ

ದಾವಣಗೆರೆ,ಮಾ.10- ಶುದ್ಧ ಕುಡಿಯುವ ನೀರಿನ ಉಪಕರಣ ನೀಡಿದ್ದ ಯುರೇಕಾ ಫೋರ್ಬ್ಸ್ ಲಿಮಿಟೆಡ್ ಸೇವೆಯನ್ನು ಸರಿಯಾಗಿ ನೀಡದೆ ನ್ಯೂನತೆ ಎಸಗಿದ್ದು, ಈ ಸಂಬಂಧ ದೂರುದಾರ ನಿವೃತ್ತ ಶಿಕ್ಷಕ ಆರ್.ಎನ್.ಶೇಖರಪ್ಪ ಅವರಿಗೆ ರೂ.4950/- ಗಳನ್ನು ಶೇಕಡ 9 ರಂತೆ ದಿನಾಂಕ 21/10/2019ರಿಂದ ನೀಡುವಂತೆ, ಮತ್ತು 5,000/-ರೂ.ಗಳನ್ನು ಮಾನಸಿಕ ವ್ಯಥೆಗಾಗಿ ಹಾಗೂ 2,000/- ರೂ.ಗಳ ಖರ್ಚು ಪಾವತಿಸಬೇಕೆಂದು ಜಿಲ್ಲಾ ಗ್ರಾಹಕರ ಆಯೋಗ ಆದೇಶ ನೀಡಿದೆ. ಆಯೋಗದ ಅಧ್ಯಕ್ಷ ಮಹಾಂತೇಶ ಈರಪ್ಪ ಶಿಗ್ಲಿ, ಸದಸ್ಯರಾದ ಸಿ.ಎಸ್. ತ್ಯಾಗರಾಜನ್ ಮತ್ತು ಶ್ರೀಮತಿ ಬಿ.ಯು. ಗೀತಾ ಇವರನ್ನೊಳಗೊಂಡ ಆಯೋಗವು ಈ ಆದೇಶ ನೀಡಿದೆ.

# ಹರೀಶ್ ಸಾಮಾಜಿಕ ಜಾಲತಾಣದ ಸಂಯೋಜಕ



ದಾವಣಗೆರೆ, ಮಾ.10- ಜಿಲ್ಲಾ ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಸಂಯೋಜಕರಾಗಿ ಕೆ. ಎಲ್.ಹರೀಶ್ ಬಸಾಪುರ ನೇಮಕಗೊಂಡಿದ್ದಾರೆ.

# ಮಾನವನ ಬದುಕಿನ ನೀತಿ ಪಾಠ ಕಲಿಸುವ ಶಾಲೆ 'ರಂಗಭೂಮಿ'

ದಾವಣಗೆರೆ, ಮಾ. 10- ಕೇವಲ ಮನರಂಜನೆಗಷ್ಟೇ ಅಲ್ಲದೇ ಬದುಕಿನ ಮೌಲ್ಯವನ್ನು ತಿಳಿಸಿಕೊಡುವುದು ನಾಟಕ ಕಲೆ. ಮಾನವನಿಗೆ ಬದುಕಿನ ನೀತಿಪಾಠ ಕಲಿಸುವ ಶಾಲೆ 'ರಂಗಭೂಮಿ' ಎಂದು ಮುರುಘಾಮಠದ ಶ್ರೀ ಬಸವಪ್ರಭು ಸ್ವಾಮೀಜಿ ನುಡಿದರು.

ನಗರದ ಶಿವಯೋಗಾಶ್ರಮದ ಆವರಣದಲ್ಲಿ ರಾಜ್ಯ ವೃತ್ತಿ ರಂಗಭೂಮಿ ಕಲಾವಿದರ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ 27 ನೇ ವಾರ್ಷಿಕೋತ್ಸವದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಟಿವಿ, ಮೊಬೈಲ್ ಹಾವಳಿಯಿಂದಾಗಿ ರಂಗಭೂಮಿ ಹಿನ್ನಡೆ ಸಾಧಿಸುತ್ತಿದ್ದೆ. ರಂಗ ಕಲಾವಿದರ ಬದುಕು ಕೂಡ ಸಂಕಷ್ಟದಲ್ಲಿದ್ದು, ಕಲೆ ಮತ್ತು ಕಲಾವಿದರನ್ನು ಉಳಿಸಿ, ಬೆಳೆಸುವ ಜವಾಬ್ದಾರಿ ಸರ್ಕಾರ, ಸಂಘ-ಸಂಸ್ಥೆಗಳು, ರಂಗಾಸಕ್ತರು ಹಾಗೂ ಸಾರ್ವಜನಿಕರದ್ದಾಗಿದೆ ಎಂದರು.

ಈ ನಿಟ್ಟಿನಲ್ಲಿ ಚಿತ್ರದುರ್ಗ ಜಮುರಾ ಹಾಗೂ ಸಾಣೇಹಳ್ಳಿಯ ಶಿವಸಂಚಾರ ಕಲಾ ತಂಡಗಳು ನಾಡಿನಾದ್ಯಂತ ರಂಗಕಲೆಯ ಮೂಲಕ ಜನಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದು, ನಾಡಿನ ಅನೇಕ ಮಠಗಳು ಸಹ ರಂಗಭೂಮಿಗೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಾ ಬಂದಿವೆ ಎಂದು ಹೇಳಿದರು.




ರಾಜ್ಯ ವೃತ್ತಿ ರಂಗಭೂಮಿ ಕಲಾವಿದರ ಸಂಘ ವಾರ್ಷಿಕೋತ್ಸವದಲ್ಲಿ ಬಸವಪ್ರಭು ಸ್ವಾಮೀಜಿ

ದೇಶದ ಸಂಪತ್ತು ಅಂದರೆ ಕೇವಲ ಬೃಹತ್ ಕಟ್ಟಡಗಳ ನಿರ್ಮಾಣವಲ್ಲ. ಕಲಾವಿದರೇ ಈ ದೇಶದ ನಿಜವಾದ ದೊಡ್ಡ ಆಸ್ತಿ. ಕಲೆಗೆ, ಕಲಾವಿದರಿಗೆ ಪ್ರೋತ್ಸಾಹ, ಸಹಕಾರ ನೀಡಿದ್ದೇ ಆದಲ್ಲಿ ಕಲಾವಿದ ಮತ್ತು ಕಲೆ ಉಳಿಯಲು ಸಾಧ್ಯ ಎಂದರು.

ಬಹುತೇಕ ಕಲಾವಿದರು ದುಶ್ಚಟಗಳ ದಾಸರಾಗಿ ತಮ್ಮ ಅದ್ಭುತ ಪ್ರತಿಭೆ, ನೆಮ್ಮದಿಯ ಬದುಕು ಹಾಗೂ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಾರೆ. ಯಾವುದೇ ಚಟಗಳಿಗೆ ಬಲಿಯಾಗದೇ ಆರೋಗ್ಯವನ್ನು ಕಾಪಾಡಿಕೊಳ್ಳುವ ಜೊತೆಗೆ ಬದುಕನ್ನು ಸುಂದರಗೊಳಿಸಿಕೊಳ್ಳುವತ್ತ ಚಿಂತನೆ ಮಾಡಬೇಕೆಂದು ಹಿತ ನುಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರಾಜ್ಯ ವೃತ್ತಿ ರಂಗಭೂಮಿ ಕಲಾವಿದರ ಸಂಘದ ಅಧ್ಯಕ್ಷ ಎ. ಭದ್ರಪ್ಪ ಭದ್ರಣ್ಣನವರ್ ಮಾತನಾಡಿ, ಕಳೆದ 27 ವರ್ಷಗಳಿಂದ ಕಲಾವಿದರ ಕಷ್ಟ ನಷ್ಟಗಳಿಗೆ ಸ್ಪಂದಿಸುತ್ತಾ, ಕಲಾವಿದರ ಏಳಿಗೆಗಾಗಿ ಶ್ರಮಿಸುತ್ತಾ ಬಂದಿದ್ದಾರೆ. ಎಸ್. ಎಸ್. ಮಲ್ಲಿಕಾರ್ಜುನ್ ಸಚಿವರಾಗಿದ್ದ ಸಂದರ್ಭದಲ್ಲಿ ಬಹಳಷ್ಟು ಕಲಾವಿದರಿಗೆ ಆಶ್ರಯ ಮನೆಗಳನ್ನು ಮಂಜೂರು ಮಾಡಿಸಿದ್ದು, ಅದರಂತೆ ಮಾಸಾಶನ ಸೇರಿದಂತೆ, ಸರ್ಕಾರದ ಸೌಲಭ್ಯಗಳನ್ನು ಕಲ್ಪಿಸಿಕೊಡುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ ಎಂದು ಹೇಳಿದರು.

ಕೇವಲ ನಾಟಕದಲ್ಲಿ ಅಭಿನಯಿಸುವುದಲ್ಲದೇ ರಾಜ್ಯ ವೃತ್ತಿ ರಂಗಭೂಮಿ ಕಲಾವಿದರ ಸಂಘದ ನೇತೃತ್ವದಲ್ಲಿ ರಾಜ್ಯದ ನೆಲ, ಜಲ, ಗಡಿ ಸಂರಕ್ಷಣೆ ಹಾಗೂ ಕಲಾವಿದರ ಸಂಕಷ್ಟ ಸಂದರ್ಭದಲ್ಲಿ ಅವರ ಪರ ಹೋರಾಟಗಳನ್ನು ಸಹ ಮಾಡುತ್ತಾ ಬಂದಿರುವುದಾಗಿ ತಿಳಿಸಿದರು.

ಕನ್ನಡ ಚಳವಳಿ ಹೋರಾಟಗಾರ ಬಸವರಾಜ ಐರಣಿ ಮಾತನಾಡಿ, ರಂಗ ಕಲೆ ಗಂಡು ಕಲೆಯಾಗಿದ್ದು, ಅದೊಂದು ಶ್ರೇಷ್ಠ ಕಲೆ ಕೂಡ ಹೌದು. ಆಧುನಿಕತೆಯ ಪ್ರಭಾವದಿಂದಾಗಿ ರಂಗಭೂಮಿಗೆ ಹಿನ್ನಡೆಯಾಗಿದೆ. ಅದರೆ ರಂಗಭೂಮಿಗೆ ಎಂದಿಗೂ ಸಾವಿಲ್ಲ. ಅದನ್ನು ಪ್ರೋತ್ಸಾಹಿಸಿ, ಉಳಿಸಿ, ಬೆಳೆಸಬೇಕಾಗಿದೆ ಎಂದರು.

ನಾಟಕ ಕಲೆಗೆ ಸರಿಯಾದ ಪ್ರೋತ್ಸಾಹ, ಸಹಕಾರ ಸಿಗದೇ ಸೊರಗಿದೆ. ಆದರೆ ಸೋಲನ್ನು ಅನುಭವಿಸಿಲ್ಲ. ಸರ್ಕಾರದ ರಂಗಾಯಣ ವೃತ್ತಿರಂಗ ಭೂಮಿ ಕಲಾವಿದರಿಗೆ ಅವಕಾಶ ನೀಡುವ ಮೂಲಕ ರಂಗ ಕಲೆಯನ್ನು ಸಂರಕ್ಷಿಸಬೇಕಾಗಿದೆ. ಈಗಾಗಲೇ ಸರ್ಕಾರದ ದಿವ್ಯ ನಿರ್ಲಕ್ಷ್ಯೆಗೆ ಒಳಗಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಂಘದ ಗೌರವಾಧ್ಯಕ್ಷ ತಿಪ್ಪೇಶರಾವ್ ಚವ್ಹಾಣ್ ಉಪಸ್ಥಿತರಿದ್ದರು. ಇದೇ ವೇಳೆ 'ಧರ್ಮದೇವತೆ' ಮತ್ತು 'ಕಳ್ಳ ಗುರು ಸುಳ್ಳ ಶಿಷ್ಯ' ನಾಟಕಗಳು ಪ್ರದರ್ಶನಗೊಂಡವು.

# ನಗರದಲ್ಲಿ ಇಂದು ಶಿವಗೋಷ್ಠಿ

ಶಿವಗೋಷ್ಠಿ ಸಮಿತಿ, ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪ ಹಾಗೂ ಸಾದರ ನೌಕರರ ಬಳಗ ಇವರ ಸಂಯುಕ್ತಾಶ್ರಯದಲ್ಲಿ ಇಂದು ಸಂಜೆ 6.30 ಕ್ಕೆ ತರಳಬಾಳು ಬಡಾವಣೆಯ ಶಿವಕುಮಾರಸ್ವಾಮಿ ಮಹಾಮಂಟಪದಲ್ಲಿ 'ಶಿವಗೋಷ್ಠಿ-293- ಸ್ಮರಣೆ-65' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮಾಗನೂರು ಬಸಪ್ಪ ಟ್ರಸ್ಟ್ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರ ಗೌಡ್ರು ಅಧ್ಯಕ್ಷತೆ ವಹಿಸಲಿದ್ದು, 'ಬಸವಣ್ಣನವರ ಮಾನವೀಯ ಮೌಲ್ಯಗಳು' ಕುರಿತು ಉಪನ್ಯಾಸಕರಾದ ಗೀತಾ ಬಸವರಾಜ್ ಉಪನ್ಯಾಸ ನೀಡಲಿದ್ದಾರೆ.

ಲಿ. ಶರಣೆ ಜಯಮ್ಮ ಎಂ.ಎಂ. ದೊಡ್ಡಮನೆ ಮತ್ತು ಲಿಂ. ಶರಣ ಎಂ. ಎಂ. ದೊಡ್ಡಮನೆ ಇವರ ಸ್ಮರಣೆಯನ್ನು ನಿವೃತ್ತ ಉಪನ್ಯಾಸಕಿ ಬಿ.ಪಿ. ಮಂಜುಳಮ್ಮ ಮಾಡಲಿದ್ದಾರೆ.

# 13 ರಂದು ಹಿಂದುಳಿದ ವರ್ಗಗಳ ವಿವಿಧ ಯೋಜನೆ ಫಲಾನುಭವಿಗಳ ಆಯ್ಕೆ ಸಭೆ

ದಾವಣಗೆರೆ, ಮಾ.10- ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವಿವಿಧ ಯೋಜನೆಯಡಿ ಸಾಲ ಹಾಗೂ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಿದ ಫಲಾನುಭವಿಗಳ ಆಯ್ಕೆ ಸಮಿತಿ ಸಭೆಯು ಇದೇ ದಿನಾಂಖ 13 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿ.ಪಂ.ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎ.ಚೆನ್ನಪ್ಪ ಅವರ ಅಧ್ಯಕ್ಷತೆಯಲ್ಲಿ ಜರುಗಲಿದೆ ಎಂದು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

## ಹೆಚ್3ಎನ್2 ವೈರಸ್‌ನಿಂದ ರಾಜ್ಯದಲ್ಲಿ ಮೊದಲ ಸಾವು

ನವದೆಹಲಿ, ಮಾ. 10 -ಹೆಚ್3 ಎನ್2 ವೈರಸ್ ಕಾರಣದಿಂದ ಕರ್ನಾಟಕದಲ್ಲಿ ಮೊದಲ ಸಾವು ಸಂಭವಿಸಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಈ ತಿಂಗಳ ಅಂತ್ಯದಿಂದ ಸೋಂಕು ಕಡಿಮೆಯಾಗುವ ನಿರೀಕ್ಷೆ ಇದೆ. ಪರಿಸ್ಥಿತಿಯ ಮೇಲೆ ನಿಗಾ ವಹಿಸಲಾ ಗುತ್ತಿದೆ ಎಂದು ಸಚಿವಾಲಯ ಹೇಳಿದೆ.

ಜನವರಿ 2ರಿಂದ ಮಾರ್ಚ್ 5ರ ನಡುವೆ ದೇಶದಲ್ಲಿ 451 ಹೆಚ್3ಎನ್2 ಸೋಂಕಿತರನ್ನು ಗುರುತಿಸಲಾಗಿದೆ. ಇದೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಸಾವು ಸಂಭವಿಸಿದೆ. ಇದೇ ದಿನದಂದು ಹರಿಯಾಣದಲ್ಲೂ ಸಹ ಒಬ್ಬರು ಮೃತಪಟ್ಟಿದ್ದಾರೆ. ದೊಡ್ಡ ಮಕ್ಕಳು ಹಾಗೂ ಸಹ ಅಸ್ವಸ್ಥತೆಯಿಂದ ಬಳಲುತ್ತಿ ರುವ ಹಿರಿಯರು ಈ ಸೋಂಕಿಗೆ ಹೆಚ್ಚು ಗುರಿಯಾಗುತ್ತಿದ್ದಾರೆ ಎಂದು ಸಚಿವಾಲಯ ಹೇಳಿದೆ. ಭಾರತದಲ್ಲಿ ಜನವರಿಯಿಂದ ಮಾರ್ಚ್‌ವರೆಗೆ ಹಾಗೂ ಮುಂಗಾರು ಮಳೆಯ ನಂತರದ ದಿನಗಳಲ್ಲಿ ಫ್ಲು ಹೆಚ್ಚಾಗಿ ಕಂಡು ಬರುತ್ತದೆ.

ಕರ್ನಾಟಕದಲ್ಲಿ 82 ವರ್ಷದ ಹಿರೇ ಗೌಡ ಎಂಬುವವರು ಮಾರ್ಚ್ 1ರಂದು ಹೆಚ್3ಎನ್2 ಕಾರಣದಿಂದ ಸಾವನ್ನಪ್ಪಿದ್ದಾರೆ ಎಂದು ಹಾಸನ ಜಿಲ್ಲೆಯ ಆರೋಗ್ಯಾಧಿಕಾರಿ ತಿಳಿಸಿದ್ದಾರೆ.

## ಬಿಎಸ್‌ಎಫ್ ಹುದ್ದೆಗಳಲ್ಲಿ ಮಾಜಿ ಅಗ್ನಿವೀರರಿಗೆ 10% ಸ್ಥಾನ

ನವದೆಹಲಿ, ಮಾ. 10 – ಗಡಿ ಭದ್ರತಾ ಪಡೆ (ಬಿ.ಎಸ್.ಎಫ್.)ಯ ಖಾಲಿ ಹುದ್ದೆಗಳಲ್ಲಿ ಶೇ.10ರಷ್ಟನ್ನು ಮಾಜಿ ಅಗ್ನಿವೀರರಿಗೆ ಮೀಸಲಿಡಲಾಗುವುದು. ಇದಕ್ಕಾಗಿ ವಯೋಮಿತಿ ಸಡಿಲಿಸಲಾಗುವುದು ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

ಮೊದಲ ತಂಡದ ಮಾಜಿ ಅಗ್ನಿವೀರರಿಗೆ ಐದು ವರ್ಷಗಳವರೆಗಿನ ಗರಿಷ್ಠ ವಯೋಮಿತಿ ವಿನಾಯಿತಿ ನೀಡಲಾಗುವುದು. ನಂತರದ ತಂಡಗಳಿಗೆ ಮೂರು ವರ್ಷಗಳ ವಿನಾಯಿತಿ ನೀಡಲಾಗುವುದು.

ಕೇಂದ್ರ ಸರ್ಕಾರ ಕಳೆದ ವರ್ಷ ಜೂನ್ 14ರಂದು ಅಗ್ನಿಪಥ ಯೋಜನೆಯನ್ನು ಜಾರಿಗೆ ತಂದಿತ್ತು. ಈ ಯೋಜನೆಯಡಿ ಸೈನ್ಯಕ್ಕೆ ಸೇರ್ಪಡೆಯಾದವರು ನಾಲ್ಕು ವರ್ಷಗಳ ಕಾಲ ಮಾತ್ರ ಕಾರ್ಯ ನಿರ್ವಹಿಸುತ್ತಾರೆ. ಇವರಲ್ಲಿ ಶೇ.25ರಷ್ಟು ಜನರನ್ನು ಪೂರ್ಣಾವಧಿಗೆ ಸೇರ್ಪಡೆ ಮಾಡಿಕೊಳ್ಳಲಾಗುವುದು.

ಅರೆ ಸೇನಾ ಪಡೆಗಳು ಹಾಗೂ ಅಸ್ಸಾಂ ರೈಫಲ್‌ಗಳಲ್ಲಿ ಅಗ್ನಿವೀರರಿಗೆ ಶೇ.10ರಷ್ಟು ಸ್ಥಾನಗಳನ್ನು ಮೀಸಲಿಡಲಾಗುವುದು ಎಂದು ಕೇಂದ್ರ ಗೃಹ ಸಚಿವಾಲಯ ಯೋಜನೆ ಪ್ರಕಟಣೆ ವೇಳೆ ತಿಳಿಸಿತ್ತು.

## ದೆಹಲಿಯ ಮಾಯಾ ಕೆಮ್‌ಟೆಕ್‌ನ ಉತ್ಪನ್ನ ಬಳಸದಂತೆ ನಿರ್ದೇಶನ

ನವದೆಹಲಿ, ಮಾ. 10 – ದೆಹಲಿಯ ಮಾಯಾ ಕೆಮ್‌ಟೆಕ್ ಇಂಡಿಯಾ ಕಂಪನಿಯಿಂದ ಪೂರೈಸಲಾಗುವ ಪ್ರೊಪಿಲೀನ್ ಗ್ಲೈಕಾಲ್ ಅನ್ನು ಬಳಸದಂತೆ ಔಷಧ ಉತ್ಪಾದಕರಿಗೆ ಔಷಧ ನಿಯಂತ್ರಕ ಡಿ.ಜಿ.ಸಿ.ಎ. ನಿರ್ದೇಶನ ನೀಡಿದೆ. ಮಾಯಾ ಕೆಮ್‌ಟೆಕ್ ಕಂಪನಿಯಿಂದ ಖರೀದಿಸಲಾದ ಪ್ರೊಪಿಲೀನ್ ಗ್ಲೈಕಾಲ್ ಬಳಸಿ ಮಾರಿಯಾನ್ ಬಯಾಟೆಕ್ ಕಂಪನಿಯು ಕೆಮ್ಮಿನ ಔಷಧಿ ಉತ್ಪಾದಿಸಿತ್ತು. ಉಜ್ಬೇಕಿಸ್ತಾನದಲ್ಲಿ ಈ ಔಷಧಿ ಸೇವಿಸಿದ ಮಕ್ಕಳ ಸಾವು ಸಂಭವಿಸಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ. ಮಾರಿಯಾನ್ ಬಯೋಟೆಕ್ ಕಂಪನಿಯ ಮೂವರು ಉದ್ಯೋಗಿಗಳನ್ನು ಬಂಧಿಸಲಾಗಿದೆ.

# ದಾವಣಗೆರೆ ಸ್ಮಾರ್ಟ್‌ಸಿಟಿ ಯೋಜನೆಗೆ ಆಯ್ಕೆಯಾಗಲು ಕಾಂಗ್ರೆಸ್ ಕಾರಣ



### ಬಸಾಪುರ : ಶಾಲಾ ಕೊಠಡಿಗಳ ಉದ್ಘಾಟನೆಯಲ್ಲಿ ಎಸ್ಸೆಸ್

ದಾವಣಗೆರೆ, ಮಾ.10- ನಗರವು ಮೊದಲ ಹಂತದಲ್ಲೇ ಸ್ಮಾರ್ಟ್‌ಸಿಟಿ ಯೋಜನೆಗೆ ಆಯ್ಕೆಯಾಗಲು ಕಾಂಗ್ರೆಸ್ ಪಕ್ಷದ ಆಡಳಿತವೇ ಕಾರಣ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ತಿಳಿಸಿದರು.

ಬಸಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಏರ್ಪಾಡಾಗಿದ್ದ ಶಾಲೆಯ ಕಟ್ಟಡದ ಅಭಿವೃದ್ಧಿ ಕಾಮಗಾರಿ ಮತ್ತು ಸರ್ಕಾರಿ ಪ್ರೌಢಶಾಲೆಯ ನವೀಕೃತ ಕಾಮಗಾರಿ ಉದ್ಘಾಟಿಸಿ ಅವರು ಮಾತನಾಡಿದರು.

ಮಹಾನಗರ ಪಾಲಿಕೆ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಆಡಳಿತ ಇದ್ದುದರಿಂದ ದಾವಣಗೆರೆ ನಗರ ಮೊದಲ ಹಂತದಲ್ಲೇ ಸ್ಮಾರ್ಟ್‌ಸಿಟಿ ಯೋಜನೆಗೆ ಆಯ್ಕೆಯಾಯಿತು. ಈ ಹಿನ್ನೆಲೆಯಲ್ಲಿ ದಾವಣಗೆರೆ ದಕ್ಷಿಣದಲ್ಲಿ ಅನೇಕ ಅಭಿವೃದ್ಧಿ ಜೊತೆಗೆ ಶಾಲೆಗಳಿಗೆ ನೂತನ ಕೊಠಡಿಗಳನ್ನು ನಿರ್ಮಿಸಲಾಗಿದೆ ಎಂದರು.

ಪಾಲಿಕೆ ವ್ಯಾಪ್ತಿಯಲ್ಲಿ ದಾವಣಗೆರೆ ಸ್ಮಾರ್ಟ್‌ಸಿಟಿ ವತಿಯಿಂದ ಸರ್ಕಾರಿ ಶಾಲಾ ಕಟ್ಟಡಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಅಂದಾಜು ರೂ.4 ಕೋಟಿಗಳ ತೆಗೆದಿರಿಸಿ ಅದರಲ್ಲಿ ಇಂದು ಅಂದಾಜು ಮೊತ್ತ ರೂ. 80.87 ಲಕ್ಷಗಳ ಮೊತ್ತದಲ್ಲಿ ಬಸಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ 6 ಕೊಠಡಿಗಳನ್ನು ಮತ್ತು ಶೌಚಾಲಯ 1 ಯೂನಿಟ್ ಹಾಗೂ ಅಂದಾಜು ಮೊತ್ತ ರೂ.13.78 ಲಕ್ಷಗಳ ಮೊತ್ತದಲ್ಲಿ ಬಸಾಪುರ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯನ್ನು ನವೀಕೃತಗೊಳಿಸಲಾಗಿದೆ ಎಂದು ತಿಳಿಸಿದರು.

ಮಹಾನಗರ ಪಾಲಿಕೆ ಮಾಜಿ ಸದಸ್ಯ ಬಾ.ಮ.ಬಸವರಾಜಯ್ಯ ಮಾತನಾಡಿ, ಈ ಶಾಲೆ 1957ರಲ್ಲಿ ಆರಂಭವಾಗಿದ್ದು, ಬಸಾಪುರದ ಅನೇಕರು ಅಭ್ಯಸಿರುವ ಶಾಲೆಯನ್ನು ಎಸ್ಸೆಸ್ ಅವರು ಆಧುನಿಕ ಕೊಠಡಿಗಳನ್ನು ನಿರ್ಮಿಸುವ ಮೂಲಕ ಗ್ರಾಮಕ್ಕೆ ಕೊಡುಗೆ ನೀಡಿದ್ದು, ಇದನ್ನು ಗ್ರಾಮದ ಪ್ರತಿಯೊಬ್ಬರು ಸದುಪಯೋಗ ಪಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಅಂಬಣ್ಣ ಮಾತನಾಡಿ, ಈ ಗ್ರಾಮದ ಜನರು ಪಟ್ಟಣದ ಖಾಸಗಿ ಶಾಲೆಗಳಿಗೆ ಮಾರುಹೋಗದೇ ಸರ್ಕಾರದಿಂದ ಮಕ್ಕಳಿಗೆ ನೀಡುವ ಸೌಲಭ್ಯಗಳನ್ನು ಬಳಸಿಕೊಂಡು ಶಿಕ್ಷಣವನ್ನು ಕೊಡಿಸಿ ಎಂದು ಮನವಿ ಮಾಡಿದರು. ಪಾಲಿಕೆಯ ಮಾಜಿ ಸದಸ್ಯ ಗೌಡ್ರ ರಾಜಶೇಖರ್ ಮತ್ತು ಎಪಿಎಂಸಿ ಮಾಜಿ ಸದಸ್ಯ ಎಂ.ಎಸ್.ಕೊಟ್ರಯ್ಯ ಮಾತನಾಡಿದರು.

ಈ ಸಂದರ್ಭದಲ್ಲಿ ಕಳೂರ್ ಮಹೇಶ್ವರಪ್ಪ, ಮಹಾನಗರ ಪಾಲಿಕೆ ಸದಸ್ಯರಾದ ಶಿವಲೀಲಾ ಕೊಟ್ರಯ್ಯ, ಬಿ.ಎಸ್. ಮರುಳಪ್ಪ, ಬಿ.ಎಸ್.ಸಿದ್ದನಗೌಡರು, ಬಿ.ಕೆ. ದೇವೇಂದ್ರಪ್ಪ, ಕೆ.ಸಿ.ಲಿಂಗರಾಜ್, ಬಿ.ರಮೇಶ್, ನಾಗವೇಣಿ, ವಿಜಯ್ ಕುಮಾರ್, ನವೀನ್, ತಿಪ್ಪೇಸ್ವಾಮಿ, ನಾಗೇಂದ್ರ ಚಾರ್, ಎನ್.ಎಂ.ಕೊಟ್ರಯ್ಯ, ಶೋಭಾ ರಾಣಿ, ಯಶೋಧ, ರೂಪ, ಶೌಖತ್‌ಅಲಿ, ಸ್ಮಾರ್ಟ್‌ಸಿಟಿ ನಿರ್ದೇಶಕ ಎಂ.ನಾಗರಾಜ್, ಹರೀಶ್ ಕೆ.ಎಲ್.ಬಸಾಪುರ, ಮಲ್ಲಿಕಾರ್ಜುನ್, ಎಚ್.ಮಹೇಂದ್ರ, ಗಣೇಶ್, ಮತ್ತು ಇತರರು ಉಪಸ್ಥಿತರಿದ್ದರು.

ಮುಖ್ಯ ಶಿಕ್ಷಕ ಸೋಮಶೇಖರಪ್ಪ ಸ್ವಾಗತಿಸಿದರು, ಶಿಕ್ಷಕಿ ಶಶಿಕಲಾ ನಿರೂಪಿಸಿದರು. ಶಿಕ್ಷಕ ರವಿ ವಂದಿಸಿದರು.

## ನೀರಿಲ್ಲದೆ ಒಣಗಿದ ನಾಟಿ : ರೈತರಿಂದ ಪ್ರತಿಭಟನೆ



ಮಲೇಬೆನ್ನೂರು, ಮಾ.10- ಭದ್ರಾ ನಾಲಾ ನಂ.3 ಉಪ ವಿಭಾಗದ 11 ಎಫ್ ಮತ್ತು 16, 17ನೇ ಉಪ ಕಾಲುವೆ ವ್ಯಾಪ್ತಿಯಲ್ಲಿ ಭತ್ತದ ನಾಟಿ ಮಾಡಿರುವ ಗದ್ದೆಗಳು ನೀರಿಲ್ಲದೇ ಬೀಡು ಸೆಳೆದಿವೆ.

ಕಮಲಾಪುರ, ಭಾನುವಳ್ಳಿ ಮತ್ತು ಹೊಸಳ್ಳಿ ಗ್ರಾಮಗಳ ನೂರಾರು ರೈತರ ಭತ್ತದ ನಾಟಿ ಗದ್ದೆಗಳು ನೀರಿಲ್ಲದೇ ಒಣಗಿರುವುದನ್ನು ಭದ್ರಾ ನಾಲಾ ನಂ.3 ವಿಭಾಗದ ಇಇ ಜಿ.ಎಸ್. ಪಾಟೀಲ್, ಎಇಇ ಚಂದ್ರಕಾಂತ್ ಅವರಿಗೆ ತೋರಿಸಿ, ಆಕ್ರೋಶ ವ್ಯಕ್ತಪಡಿಸಿದರು.

ನೀರು ಹರಿಸುವ ತನಕ ನಿಮ್ಮನ್ನು ಇಲ್ಲಿಂದ ಹೋಗಲು ಬಿಡುವುದಿಲ್ಲ ಎಂದು ರೈತರು ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ನಂತರ ರೈತರನ್ನು ಸಮಾಧಾನ ಪಡಿಸಿದ ಭದ್ರಾ ಜಲಾಶಯ ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ.ದ್ಯಾವಪ್ಪ ರೆಡ್ಡಿ ಅವರು, ಈ ಭಾಗದ ಕಾಲುವೆಗಳಿಗೆ ರೊಟೇಷನ್ ಪ್ರಕಾರ ನೀರು ಬಿಟ್ಟು ಈಗಾಗಲೇ 5 ದಿನ ಕಳೆದಿದ್ದರೂ ಕನಿಷ್ಠ ನೀರು ಬಂದಿಲ್ಲ. ಉಳಿದ 5 ದಿನಗಳಲ್ಲಿ ಈ ರೈತರಿಗೆ ಸಮರ್ಪಕವಾಗಿ ನೀರ ಹರಿಸದಿದ್ದರೆ, ನೀರಾವರಿ ಕಚೇರಿಗೆ ಬೀಗ ಹಾಕಿ, ಪ್ರತಿಭಟಿಸುವುದಾಗಿ ಹೇಳಿ ರೈತರ ಪ್ರತಿಭಟನೆ ಕೈ ಬಿಡಿಸಿದರು.

ಭಾನುವಳ್ಳಿಯ ನಾರಾಯಣಪ್ಪ, ಮಲ್ಲಪ್ಪ ರೆಡ್ಡಿ, ಪವಾಡಿ ಮಂಜಪ್ಪ, ಯಲ್ಲಪ್ಪ, ಹನುಮಂತಪ್ಪ, ಕಮಲಾಪುರದ ದೊಡ್ಡಬಸಪ್ಪ, ಮಲ್ಲಿಕಾರ್ಜುನ್, ಹೊಸಳ್ಳಿಯ ಎ.ಕೆ.ಹನುಮಂತಪ್ಪ, ಪಕ್ಕೀರಪ್ಪ, ಗೋಪಾಲಪ್ಪ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

## ಬಿಜೆಪಿಗೆ ಬೆಂಬಲಿಸುವುದಾಗಿ ಸಂಸದೆ ಸುಮಲತ ಘೋಷಣೆ



ಮಂಡ್ಯ, ಮಾ. 10 - ಮಂಡ್ಯದ ಅಭಿವೃದ್ಧಿ ದೃಷ್ಟಿಯಿಂದ ಬಿಜೆಪಿಗೆ ಬೆಂಬಲ ನೀಡುತ್ತೇನೆ ಎಂದು ಸಂಸದೆ ಸುಮಲತಾ ಶುಕ್ರವಾರ ಘೋಷಣೆ ಮಾಡಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಸ್ಥಿರ ನಾಯಕತ್ವ, ಜನಪರ ಕಾಳಜಿ ಮೆಚ್ಚಿ ಬಿಜೆಪಿ ಜೊತೆ ಗುರುತಿಸಿಕೊಳ್ಳಲು ನಿರ್ಧರಿಸಿದ್ದೇನೆ. ಸದ್ಯ ಬಿಜೆಪಿ ಸೇರ್ಪಡೆಯಾಗಲು ತಾಂತ್ರಿಕ ತೊಂದರೆ ಇದೆ, ಪಕ್ಷೇತರ ಸಂಸದರು ಗೆದ್ದ 6 ತಿಂಗಳೊಳಗೆ ಯಾವುದಾದರೂ ಪಕ್ಷ ಸೇರಲು ಅವಕಾಶವಿದೆ. ನಾನು ಗೆದ್ದು 4 ವರ್ಷಗಳಾಗಿದ್ದು, ಈಗ ಪಕ್ಷ ಸೇರಲು ಸಾಧ್ಯವಿಲ್ಲ. ಹೀಗಾಗಿ ಪಕ್ಷೇತರ ಸಂಸದೆಯಾಗಿಯೇ ಉಳಿದು ಬಿಜೆಪಿಗೆ ಬೆಂಬಲ ನೀಡುತ್ತೇನೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ನನ್ನ ಬೆಂಬಲಿಗರು, ಹಿತೈಷಿಗಳು ಹಾಗೂ ಅಂಬರೀಷ್ ಅಭಿಮಾನಿಗಳು ಯಾವುದಾದರೂ ಪಕ್ಷ ಸೇರ್ಪಡೆಯಾಗುವಂತೆ ಒತ್ತಾಯ ಮಾಡಿದ್ದರು. ಜಿಲ್ಲೆಯ ರಾಜಕಾರಣ ಕಲುಷಿತಗೊಂಡಿದ್ದು, ಅದನ್ನು ಶುದ್ಧಗೊಳಿಸುವುದಕ್ಕಾಗಿ ಬಿಜೆಪಿಗೆ ಬೆಂಬಲ ನೀಡುತ್ತೇನೆ. ಈ ನಿರ್ಧಾರದ ಹಿಂದೆ ಸ್ವಾರ್ಥವಿಲ್ಲ, ಜಿಲ್ಲೆ ಹಿತಕ್ಕಾಗಿ ಈ ನಿರ್ಧಾರ ಕೈಗೊಂಡಿದ್ದೇನೆ ಎಂದರು.

## ರಾಣೇಬೆನ್ನೂರಿನಲ್ಲಿ ಇಂದು ಉಚಿತ ಹೃದಯ ತಪಾಸಣೆ ಶಿಬಿರ

ದಾವಣಗೆರೆಯ ಎಸ್.ಎಸ್. ನಾರಾಯಣ ಹಾರ್ಟ್ ಸೆಂಟರ್, ರಾಣೇಬೆನ್ನೂರಿನ ನಾಗಶಾಂತಿ ಎಜುಕೇಶನ್ ಟ್ರಸ್ಟ್ ಹಾಗೂ ಸ್ವಾಭಿಮಾನಿ ಕನ್ನಡ ಸಂಘದಿಂದ ಇಂದು ರಾಣೇಬೆನ್ನೂರಿನ ಉನ್ನತಿ ಕಾಲೇಜಿನಲ್ಲಿ ಉಚಿತ ಹೃದಯ ತಪಾಸಣೆ ಶಿಬಿರ ನಡೆಸಲಾಗುವುದು.

ಬೆಳಿಗ್ಗೆ 9 ರಿಂದ ಮಧ್ಯಾಹ್ನ 2 ವರೆಗೆ ನಡೆಯುವ ಈ ಶಿಬಿರದಲ್ಲಿ ಇಸಿಜಿ, 2ಡಿ, ಇಕೋ ಹಾಗೂ ವೈದ್ಯರೊಡನೆ ಸಮಾಲೋಚನೆ ನಡೆಸುವರು ಎಂದು ಸಂಸ್ಥೆಯ ಅಧ್ಯಕ್ಷ ಬಸವರಾಜ ಪಾಟೀಲ ಮನವಿ ಮಾಡಿದ್ದಾರೆ.

## ನಗರದಲ್ಲಿ ಇಂದು ಕಸಾಪ ದತ್ತಿ ಉಪನ್ಯಾಸ


ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಕೆ.ಬಿ. ಬಡಾವಣೆಯ ಡಿಜೆವಿ ಪ್ರೌಢಶಾಲಾ ಆವರಣದಲ್ಲಿ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಶಿಕ್ಷಕ ವಿಜಯಕುಮಾರ್ ಚಿಂದಿ ಅಧ್ಯಕ್ಷತೆ ವಹಿಸುವರು. 'ವಿದ್ಯಾರ್ಥಿ ಗಳಿಗೆ ರಸಪ್ರಶ್ನೆ ಮತ್ತು ಪರೀಕ್ಷಾ ಪೂರ್ವ ಸಿದ್ಧತೆ' ಕುರಿತು ಸಾಹಿತಿ ಗಂಗಾಧರ್ ಬಿ. ನಿಟ್ಟೂರು ಉಪನ್ಯಾಸ ನೀಡುವರು.

ಮುಖ್ಯ ಅತಿಥಿಗಳಾಗಿ ಕಸಾಪ ತಾಲ್ಲೂಕು ಅಧ್ಯಕ್ಷೆ ಎ.ಜಿ. ಸುಮತಿ ಜಯಪ್ಪ, ಕಸಾಪ ನಿರ್ದೇಶಕಿ ಮಲ್ಲಮ್ಮ, ಶಿಕ್ಷಕ ಪಂಪಾಪತಿ, ಷಡಾಕ್ಷರಪ್ಪ ಎಲೆಬೇತೂರು, ಲಕ್ಷ್ಮಿ ಮತ್ತಿತರರು ಭಾಗವಹಿಸಲಿದ್ದಾರೆ.

## ಹರಿಹರ ತಾ.ನಲ್ಲಿ ಇಂದು ಸಂಸದ ಸಿದ್ದೇಶ್ವರ ಪ್ರವಾಸ

ಸಂಸದ ಜಿ.ಎಂ. ಸಿದ್ದೇಶ್ವರ ಅವರು ಇಂದು ಹರಿಹರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಧ್ಯಾಹ್ನ 12 ರಿಂದ ಸಂಜೆ 4 ರವರೆಗೆ ಹರಿಹರ, ಕೆ.ಬೇವಿನಹಳ್ಳಿ, ಸಂಕ್ಲೀಪುರ, ಕೊಪ್ಪ, ಕೊಮಾರನಹಳ್ಳಿ, ಜಿಗಳಿ, ಕೊಕ್ಕನೂರು ಹಾಗೂ ನಂದೀಶ್ವರ ಕ್ಯಾಂಪ್ ಗ್ರಾಮಗಳಲ್ಲಿ ಲೋಕೋಪಯೋಗಿ ಹಾಗೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಒಟ್ಟು ರೂ. 19.43 ಕೋಟಿಗಳ ವಿವಿಧ ಕಾಮಗಾರಿಗಳ ಗುದ್ದಲಿ ಪೂಜೆ ಕಾರ್ಯಕ್ರಮಗಳನ್ನು ನೆರವೇರಿಸಲಿದ್ದಾರೆ.


ಚಿರಸ್ಮರಣೆ



ಲಿಂ. ಶ್ರೀ ಕೆ.ಜೆ. ಸುರೇಶ್ (ಬಾಬಣ್ಣ)
ಶಿರಮಗೊಂಡನಹಳ್ಳಿ
ನಿಧನ : 11-03-2019

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ ಮತ್ತು ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಧರ್ಮಪತ್ನಿ : ಶ್ರೀಮತಿ ಪುಷ್ಪಾ ಸುರೇಶ್
ಮಾಜಿ ಉಪಾಧ್ಯಕ್ಷರು, ಜಿಲ್ಲಾ ಪಂಚಾಯ್ತಿ, ದಾವಣಗೆರೆ.
ಪುತ್ರ : ಚಿ. ಸನತ್ ಸೂರ್ಯ
ಪುತ್ರಿ : ಶ್ರೀಮತಿ ಸಂಜನಾ, ಅಳಿಯ : ಸಚಿನ್ ಗೌಡ
ಸಹೋದರರು, ಸಹೋದರಿಯರು ಮತ್ತು ಬಂಧು-ಮಿತ್ರರು.

॥ ಶ್ರೀ ಲಕ್ಷ್ಮಿ ವೆಂಕಟೇಶ್ವರ ಪ್ರಸನ್ನ ॥

ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ

ಶ್ರೀಮತಿ ದೇವಿಬಾಯಿ ಶಂಕರ್ ಮತ್ತು ಮಕ್ಕಳು, ದಾವಣಗೆರೆ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 01-03-2023ನೇ ಬುಧವಾರ ರಾತ್ರಿ 10:16ಕ್ಕೆ ನನ್ನ ಪೂಜ್ಯ ಪತಿಯವರಾದ



ಜನನ : 30-07-1952
ನಿಧನ : 01-03-2023

ಶ್ರೀ ಬಿ.ಆರ್. ಶಂಕರ್
ನಿವೃತ್ತ ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ವೈಕುಂಠ ಸಮಾರಾಧನೆಯನ್ನು
ದಿನಾಂಕ 12-03-2023ನೇ ಭಾನುವಾರ ಮಧ್ಯಾಹ್ನ 12:30ಕ್ಕೆ ಮೃತರ ಸ್ವಗೃಹ, ಮನೆ ನಂ. 234, 'ಸಾಯಿ ಸುಕೃತಿ' 8ನೇ ಕ್ರಾಸ್, 'ಬಿ' ಬ್ಲಾಕ್, ದೇವರಾಜ್ ಅರಸ್ ಬಡಾವಣೆ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ದೇವಿಬಾಯಿ ಶಂಕರ್ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು. ಮೊ. : 98862 10551

ವಿ.ಸೂ.: ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.





JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte